ಕಲ್ಯಾಣ ಕಿರಣ

ನವೆಂಬರ್-2011 ಬೆಲೆ-10/-



ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರಿಂದ
ಪೀಠಾರೋಹಣ



ಜಗದ್ಗುರು ಮಾತೆ ಗಂಗಾದೇವಿಯವರಿಂದ ಧ್ವಜಾರೋಹಣ





ಮಂಜುಳಾ ನಾಯ್ಡು ಅವರಿಂದ ಮಹಿಳಾಗೋಷ್ಠಿ ಉದ್ಘಾಟನೆ

ಕಲ್ಯಾಣ ಕಿರಣ ಪುಟ ಸಂಖ್ಯೆಯಲ್ಲಿ ಪ್ರಮಾದ

ಕಲ್ಯಾಣ ಕಿರಣ ನವೆಂಬರ್ ಸಂಚಿಕೆಯ ಪುಟ ಸಂಖ್ಯೆಯಲ್ಲಿ ಪ್ರಮಾದ ಕರವಾದ ತಪ್ಪುಗಳಾಗಿದ್ದು ಸರಿಪಡಿಸಿ ಒಪ್ಪೋಲೆ ಕೊಡಲಾಗಿದೆ. ಓದುಗರು ಸರಿ ಪಡಿಸಿಕೊಂಡು ಓದಬೇಕೆಂದು ವಿನಂತಿ ಮಾಡುತ್ತೇವೆ.

ತಪ್ಪು	ಒಪ್ಪು	ತಪ್ಪು	ಒಪ್ಪು
02	03	18	19
03	30	19	14
04	05	20	21
05	28	21	12
06	07	22	23
07	26	23	10
08	09	24	25
09	24	25	08
10	11	26	27
11	22	27	06
12	13	28	29
13	20	29	04
14	15	30	31
16	17	31	02
17	16	32	32

ದಯವಿಟ್ಟು ಪುಟ ಸಂಖ್ಯೆಯನ್ನು ಸರಿಪಡಿಸಿಕೊಂಡು ಬರೆದು, ಓದಿ ಕೊಳ್ಳಿರಿ. ಆಗಿರುವ ಪ್ರಮಾದಕ್ಕೆ ವಿಷಾದಿಸುತ್ತೇವೆ.





ನವದೆಹಲಿಯ ಬಸವ ಮಂಟಪದಲ್ಲಿ
ವಿದ್ಯಾರ್ಥಿಗಳಿಗೆ ಅವಕಾಶ.

ನವದೆಹಲಿಯ ಬಸವ ಮಂಟಪದಲ್ಲಿ ಕಂಪ್ಯೂಟರ್ ತರಗತಿ, ಯೋಗ ತರಬೇತಿ ಮಾತ್ರವಲ್ಲದೆ Spoken English ಕೋರ್ಸ್‌ಗಳು ಯಶಸ್ವಿಯಾಗಿ ನಡೆಯುತ್ತಲಿವೆ. ಜೊತೆಗೆ ಪಿ.ಜಿ.ಯನ್ನು ನಡೆಸಲಾಗುತ್ತಿದೆ. ಕರ್ನಾಟಕದಿಂದ ಬಂದು ದೆಹಲಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಐ.ಎ.ಎಸ್ ತರಬೇತಿ, ಎಲ್.ಎಲ್.ಬಿ, ದೆಹಲಿ ವಿಶ್ವವಿದ್ಯಾಲಯದ ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಈ ಪಿ.ಜಿಯ ಸೌಲಭ್ಯ ಪಡೆದಿದ್ದಾರೆ. ಇವರಿಗೆ ಪ್ರಶಾಂತ,ಸಾತ್ವಿಕ ವಾತಾವರಣ ವಿದ್ಯಾರ್ಜನೆಗೆ ಲಭ್ಯವಾಗಿರುವುದಲ್ಲದೆ ಉತ್ತರ ಕರ್ನಾಟಕದ (ರೊಟ್ಟಿ)ಊಟ ಮತ್ತು. ದಕ್ಷಿಣ ಕರ್ನಾಟಕದ (ಮುದ್ದೆ) ಊಟ ಎರಡೂ ಲಭ್ಯವಾಗುತ್ತಲಿದೆ.

ಆದ್ದರಿಂದ ಕರ್ನಾಟಕದಿಂದ ವಿದ್ಯಾರ್ಜನೆಗೆ ಹೋಗುವ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಈ ಸೌಲಭ್ಯದ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಆಶಿಸುತ್ತೇವೆ. ಕೋಣೆಯ ಬಾಡಿಗೆ, ಊಟದ ಶುಲ್ಕ ಮುಂತಾದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ :

ದೂರವಾಣಿಗಳು :
011-64563860
09538095692

ಪೂಜ್ಯ ಶ್ರೀ ಮಾತೆ ಸರ್ವಮಂಗಳಾದೇವಿ
ಮಾತಾ ಆಶ್ರಮ, ಬಸವ ಮಂಟಪ
H 3/82, ಬೆಂಗಾಲಿ ಕಾಲೊನಿ
ಮಹಾವೀರ್ ಎನ್‌ಕ್ಲೇವ್, ನವದೆಹಲಿ - 45

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಶರಣ ಮೇಳದ ರಜತ ಮಹೋತ್ಸವದ ಅಂಗವಾಗಿ **"ಶರಣ ಸಂಗಮ"** ಎಂಬ ವಿಶೇಷ ಸ್ಮರಣ ಸಂಚಿಕೆಯನ್ನು ಪ್ರಕಟಿಸಲು ಸಂಕಲ್ಪಿಸಲಾಗಿದ್ದು, ಇದು ಅಸಂಖ್ಯಾತ ಶರಣ ಬಂಧುಗಳಿಗೆ ತಲುಪುವುದರಿಂದ ಆಸಕ್ತರು ತಮ್ಮ ಉದ್ದಿಮೆ, ವ್ಯವಹಾರಕ್ಕೆ ಸಂಬಂಧಿಸಿದ ಜಾಹಿರಾತು ನೀಡಲು ಅವಕಾಶವಿದ್ದು, ಇದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಲು ವಿನಂತಿಸಲಾಗಿದೆ.

ದೂ : 9448137508, 9945255525



ಮಂಜುಳಾ ನಾಯ್ಡು ಅವರಿಂದ ಮಹಿಳಾಗೋಷ್ಠಿ ಉದ್ಘಾಟನೆ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-41	ಬಸವ ಶಕೆ -878	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-11	ನವೆಂಬರ್- 2011	ವಾರ್ಷಿಕ ಚಂದಾ 100 ರೂ.

ಚನ್ನಬಸವೇಶ - ಮಂಟಪದ ಮಾಣಿಕ್ಯ

ಶ್ರೀ ಚನ್ನ ಬಸವೇಶ ಭಕ್ತರನು ಪೊರೆವೀಶ
ಜಯ ಭಜಕ ಜನ ಬಂಧು ಕಾರುಣ್ಯ ಸಿಂಧು ॥ ಪ ॥

ಪರಮ ಗುರು ಬಸವನ ಕರಕಮಲ ಜನಿತನೆ
ಶರಣ ಹೃತ್ಸರಸಿಯ ಶ್ರೀ ಪರಮಹಂಸೆಯೆ ॥ ಅ.ಪ ॥

ಕಾರ್ತಿಕ ಪ್ರತಿಪದೆಯ ದೀವಳಿಗೆಯಂದು
ಮಾತೆಯ ಗರ್ಭದಿಂ ನೀ ಬಂದೆಯಂದು ।
ಅವ್ವ ನಾಗಾಂಬಿಕೆಯ ಅಕ್ಕರೆಯ ಚಿಣ್ಣನೆ
ಅಯ್ಯ ಶಿವದೇವನ ಮಮತೆಯ ತನುಜನೆ ॥ 1 ॥

ಷಟಸ್ಥಲದ ಚೌಕಟ್ಟ ವಚನ ಶಾಸ್ತ್ರಕ್ಕೆ ಇತ್ತೆ
ಸಟೆಯ ಮಾಯೆಯ ಗೆಲಿದು ವಿರಾಗಿ ಎನಿಸಿದೆ ।
ಉನ್ಮನಿಯ ಉಯ್ಯಾಲೆಯಲ್ಲಿ ತೂಗಿ ನಲಿದು
ಅನುಭವ ಮಂಟಪದ ಹೊಂಗಳಶವಾದೆ ॥ 2 ॥

ವಚನ ವಾಙ್ಮಯಕ್ಕಂದು ಸಂಕಷ್ಟ ಎರಗಿರಲು
ಕಾಷಾಯ ಧರಿಸಿಯೂ ಖಡ್ಗವನು ನೀ ಹಿಡಿದೆ ।
ಮುನ್ನಡೆಸಿ ಶರಣರ ವಾಙ್ಮಯವ ರಕ್ಷಿಸಿದೆ
ಚನ್ನ ಹುಣ್ಣಿಮೆಯಂದು ಉಳವಿಯಲಿ ಬಯಲಾದೆ ॥ 3 ॥

ನೀ ಪಾದವಿಟ್ಟುದು ಸುಕ್ಷೇತ್ರ ತಾನಾಯ್ತು
ನೀ ನುಡಿದ ಮಾತೆಲ್ಲ ದಿವ್ಯ ಶಾಸ್ತ್ರವದಾಯ್ತು
ಶರಣ ಧರ್ಮದ ಉಳಿವು ನಿನ್ನಿಂದಲೇ ಆಯ್ತು
ಸಚ್ಚಿದಾನಂದನ ಮೆಚ್ಚುಗೆಯ ಮಗನಾದೆ ॥ 4 ॥

ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳಿತಂದನಯ್ಯಾ ಶಿವನು;
ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತಯ್ಯಾ
ಚಿತ್ತದ ಪ್ರಕೃತಿಯ ಹಿಂಗಿಸಿ,
ಮುಕ್ತಿ ಪಥವ ತೋರಿದನೆಲ್ಲ ಅಸಂಖ್ಯಾತ ಗಣಂಗಳಿಗೆ.
ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ
ಭಾವವೆಲ್ಲ ಮಹಾಘನದ ಬೆಳಗು
ಚನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಸಮ್ಯಕ್ ಜ್ಞಾನಿ ಚನ್ನಬಸವಣ್ಣನ ಶ್ರೀ ಪಾದಕ್ಕೆ ಶರಣೆಂದು,
ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ಪ್ರಭುವೆ.

- ಜಗನ್ಮಾತಾ ಅಕ್ಕಮಹಾದೇವಿ



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಇಪ್ಪತ್ತೈದನೆಯ ಶರಣ ಮೇಳ

ರಜತ ಮಹೋತ್ಸವ

2012ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತೈದನೆಯ ಶರಣ ಮೇಳವು 2012ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ

2012 ರ ಜನವರಿ 11, 12, 13, 14, 15ರಂದು ನಡೆಯಲಿರುವ

ಇಪ್ಪತ್ತೈದನೆಯ ಶರಣಮೇಳದ ಅಂಗವಾಗಿ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ

ಪ್ರಚಾರ ಪ್ರವಾಸ ಕಾರ್ಯಕ್ರಮ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
10.	10-11-2011	ಪ್ರಭು (ಗುರು)ವಾರ	ಭದ್ರಾವತಿ
11.	11-11-2011	ಮಾತೃ (ಶುಕ್ರ)ವಾರ	,,
12.	12-11-2011	ಶರಣ (ಶನಿ)ವಾರ	ಶಿವಮೊಗ್ಗ
13.	13-11-2011	ದೇವ(ಭಾನು)ವಾರ	ಕೊಮ್ಮನಾಳ
14.	14-11-2011	ಶಿವ(ಸೋಮ)ವಾರ	ದಾವಣಗೆರೆ
15.	15-11-2011	ಬಸವ(ಮಂಗಳ)ವಾರ	ಚಿತ್ರದುರ್ಗ
16.	16-11-2011	ಚನ್ನ(ಬುಧ)ವಾರ	ಚಳ್ಳಕೆರೆ
17.	17-11-2011	ಪ್ರಭು(ಗುರು)ವಾರ	ದೊಡ್ಡಉಳ್ಳಾರ್ತಿ
18.	18-11-2011	ಮಾತೃ (ಶುಕ್ರ)ವಾರ	ಚಿತ್ರನಾಯಕನ ಹಳ್ಳಿ
19.	19-11-2011	ಶರಣ (ಶನಿ)ವಾರ	ಬಳ್ಳಾರಿ
20.	20-11-2011	ದೇವ (ಭಾನು)ವಾರ	,,
21.	21-11-2011	ಶಿವ (ಸೋಮ)ವಾರ	ಕೋಡಲ್
22 .	22-11-2011	ಬಸವ (ಮಂಗಳ)ವಾರ	ನಾಗಲಾಪುರ
23.	23-11-2011	ಚನ್ನ(ಬುಧ)ವಾರ	ಶಿರುಗುಪ್ಪ
24.	24-11-2011	ಪ್ರಭು(ಗುರು)ವಾರ	ರಾಯಚೂರು
25.	25-11-2011	ಮಾತೃ(ಶುಕ್ರ)ವಾರ	ಶಕ್ತಿನಗರ
26.	26-11-2011	ಶರಣ(ಶನಿ)ವಾರ	ಗಂಗಾಪತಿ

ಸಂಪಾದಕೀಯ : - ಮಾತಾಜಿ

ಪೇಜಾವರ ಶ್ರೀಗಳ ಅತಿರೇಕದ ಹೇಳಿಕೆ ಖಂಡನಾರ್ಹ

ಲಿಂಗಸೂಗೂರಿನಲ್ಲಿ ದಿ.29-10-2011ರಂದು ನಡೆದ ವಿಜಯ ಮಹಂತೇಶ್ವರ ಶಾಖಾ ಅನುಭವ ಮಂಟಪದಲ್ಲಿ ಆಯೋಜಿಸಲಾಗಿದ್ದ ವಿಶ್ವ ಬಸವ ಧರ್ಮ ಸಮಾವೇಶದ ಮೊದಲ ಗೋಷ್ಠಿಯಲ್ಲಿ ಉಪನ್ಯಾಸ ಮಾಡಿದ ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು ಅತಿರೇಕದ ಕೆಲವು ಹೇಳಿಕೆ ನೀಡಿದ್ದು ಖಂಡನಾರ್ಹವಾಗಿದೆ. ಅವರು ಮಾತನಾಡುತ್ತ, "ಕಟ್ಟಕಡೆಯ ಮನುಷ್ಯನನ್ನು ಸಮಾನವಾಗಿ ಕಾಣುವಂತಹ ವಿಚಾರಗಳನ್ನು ನೀಡಿದವರು ಕಣ್ಮಣಿಗಳಾದ ಬಸವಣ್ಣ ಮತ್ತು ಮಧ್ವಾಚಾರ್ಯರು ಮಾತ್ರ" ಎಂದಿದ್ದಾರೆ. (ವರದಿ -ಪ್ರಜಾವಾಣಿ 31-10-2011 ಪುಟ 3B ಕೊಪ್ಪಳ ಆವೃತ್ತಿ)

ವೈಷ್ಣವ ಸಂಪ್ರದಾಯದ ಮಧ್ವಾಚಾರ್ಯ ಮಠದ ಪೀಠಾಧಿಪತಿಗಳಾಗಿರುವುದರಿಂದ ಅವರು ಆ ರೀತಿ ಹೇಳಿರುವುದು ಸಹನೀಯವಾದರೂ ಆಕ್ಷೇಪಾರ್ಹವೇ ಸರಿ. ಹಿಂದು ಧರ್ಮದಲ್ಲಿ ಅತ್ಯಂತ ಮಡಿವಂತ ಮತ್ತು ಮತಾಂಧತೆಯ ಸಂಪ್ರದಾಯ ಮಾಧ್ವರದು. ಅದಕ್ಕಾಗಿಯೇ ಕುವೆಂಪುರವರು ನಾಡಗೀತೆಯಾದ "ಜೈ ಭಾರತ ಜನನಿಯ ತನುಜಾತೆ"ಯಲ್ಲಿ ಮಾಧ್ವರ ಹೆಸರನ್ನು ಸೇರಿಸದೆ ಇದ್ದುದು. ಶೂದ್ರ, ಅಸ್ಪೃಶ್ಯರನ್ನು ಅತ್ಯಂತ ನಿಕೃಷ್ಟವಾಗಿ ಕಂಡ ಸಂಪ್ರದಾಯವದು. ಬಸವಣ್ಣನವರನ್ನು ಮಾಧ್ವರಿಗೆ ಹೋಲಿಸುವುದು ಉತ್ತರ ಮತ್ತು ದಕ್ಷಿಣ ಧ್ರುವ ಎರಡನ್ನೂ ಸೇರಿಸುವ ಸಾಹಸದಂತೆ. ಆದರೂ ಇದು ಸಹನೀಯ.ಮುಂದುವರಿದು ಮಾತನಾಡಿದ ಅವರು, "ಸರ್ವಧರ್ಮ ಗಳಲ್ಲಿ ಹಿಂದೂ ಧರ್ಮವು ಸರ್ವ ಶ್ರೇಷ್ಠವಾದದು. ಆದರೆ ಮಧ್ಯಂತರದಲ್ಲಿ ಕೆಲ ಸಂತರು, ಶರಣರು ಗೊಂದಲ ಸೃಷ್ಟಿಸಿ ಮಲಿನಗೊಳಿಸಿದ್ದಾರೆ. ಮಲಿನಗೊಂಡ ವಿಚಾರಗಳಿಗೆ ಕಾಯಕಲ್ಪ ಕಲ್ಪಿಸಿ ವಿಶ್ವಶ್ರೇಷ್ಠ ಹಿಂದೂ ಧರ್ಮದ ಪಾವಿತ್ರ್ಯತೆ ಕಾಪಾಡಲು ಶ್ರಮಿಸಬೇಕಾಗಿದೆ."

ಹಿಂದೂ ಧರ್ಮ ಸರ್ವಶ್ರೇಷ್ಠವೆಂದು ಇದರ ಕುರೂಪವನ್ನು ಮುಚ್ಚಲು ಒಂದು ಸುಂದರ ತೆರೆಯನ್ನು ಎಳೆಯುತ್ತಾರೆ. ಇಲ್ಲಿರುವ ವರ್ಣವ್ಯವಸ್ಥೆ; ಅದರ ಫಲವಾದ ಜಾತೀಯತೆ ಮತ್ತು ಅಸ್ಪೃಶ್ಯತೆ, ಸ್ತ್ರೀ ಶೋಷಣೆ, ಮೂಢ ನಂಬಿಕೆ, ಬಹುದೇವತೋಪಾಸನೆ ಅಸಹನೀಯ ಮತ್ತು ಭಯಂಕರ.ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಬುದ್ಧ, ಮಹಾವೀರ, ಗುರು ಬಸವಣ್ಣ ಮತ್ತು ಗುರು ನಾನಕರು ಹೊಸ ಧರ್ಮಗಳನ್ನು ಕೊಡಬೇಕಾಯಿತು. ಬ್ರಹ್ಮ ಸಮಾಜ, ಆರ್ಯ ಸಮಾಜ ಮುಂತಾದವು ಪ್ರಾರಂಭಗೊಂಡವು. ಮಹಾತ್ಮ ಫುಲೆ, ನಾರಾಯಣ ಗುರು ಮುಂತಾದ ಸಮಾಜ ಸುಧಾರಕರು ಹುಟ್ಟಿಕೊಂಡರು. ಡಾ|| ಅಂಬೇಡ್ಕರ್ ಬೇಸತ್ತು ಬೌದ್ಧ ಧರ್ಮವನ್ನು ಸೇರಿದರು. ಇದನ್ನೆಲ್ಲ ಅರಿತೂ ಅರಿಯದವರಂತೆ ಪೇಜಾವರ ಶ್ರೀಗಳು ಮಾತನಾಡುವುದು ಹಾಸ್ಯಾಸ್ಪದ. ಹಿಂದು ಧರ್ಮ ಸೃಷ್ಟಿಸಿದ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಶರಣರು ಮತ್ತು ಕೆಲವು ಭಕ್ತಿಪಂಥದ ಸಂತರು ಬಹುಬಗೆಯ ಪ್ರಯತ್ನ ಮಾಡಿದ್ದಾರೆ. ಇಲ್ಲವಾದಲ್ಲಿ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಿಗೆ ಇನ್ನೂ ಹೆಚ್ಚಿನ ಮತಾಂತರವಾಗುತ್ತಿತ್ತು. ಉಷ್ಟ್ರಪಕ್ಷಿ ಪೊದೆಯಲ್ಲಿ ಮುಖ ಮುಚ್ಚಿಕೊಂಡು ತಾನು ಶತ್ರುವಿನಿಂದ ಪಾರಾದೆ ಎಂದುಕೊಳ್ಳುವಂತಹ ಮನೋಭಾವದಂತೆ ಒಳಗಿನ ಹುಳುಕು, ಹಿಂದು ಧರ್ಮದ ಮೇಲೆ ಸಮಾಜದ ಮೇಲೆ ಆಗುತ್ತಿರುವ ಸಾಂಸ್ಕೃತಿಕ ದಾಳಿ ಎಲ್ಲವನ್ನೂ ಕಡೆಗಣಿಸಿ "ಹಿಂದು ಧರ್ಮವು ಸರ್ವ ಶ್ರೇಷ್ಠ"ಎಂಬ ಮಾತು ಬಹು ಧಾರ್ಷ್ಟ್ಯದ್ದು. ಪೇಜಾವರ ಶ್ರೀಗಳು ಶರಣರು ಮತ್ತು ಸಂತರು ಹಿಂದು ಧರ್ಮವನ್ನು ಮಲಿನಗೊಳಿಸಿದರು ಎಂಬ ಮಾತುಗಳನ್ನು ವಾಪಸ್ಸು ಪಡೆಯಬೇಕು.

ಹಿಂದೊಮ್ಮೆ ಲಿಂಗಾಯತರು ಮತಾಂತರ ಮಾಡುತ್ತಾರೆ ಎಂಬ ಹೇಳಿಕೆ ಕೊಟ್ಟಿದ್ದರು. ಹಿಂದು ಧರ್ಮಕ್ಕೆ ಹೊರಹೋಗುವ ಬಾಗಿಲು ಹತ್ತಾರು, ಒಳಗೆ ಹೋಗಲು ಬಾಗಿಲಿಲ್ಲ. ಇದನ್ನು ಅರಿತು ಗುರು ಬಸವಣ್ಣನವರು ಲಿಂಗಾಯತ ಧರ್ಮದ ಮೂಲಕ ಬಾಗಿಲನ್ನು ತೆರೆದಿದ್ದಾರೆ. ಅದರ ಮಹತ್ವ ತಿಳಿದು ಹರ್ಷಿಸಬೇಕು.

ಜಾವ ಮೂರು ಘಂಟೆ. ಪೂಜ್ಯ ಗುರುಗಳ ಸ್ನಾನ ಪೂರೈಸಿತು. ಮಠದ ಕಾರ್ಯಕರ್ತರು ನನಗೂ ಸ್ನಾನಕ್ಕೆ ಅಣಿಮಾಡಿಕೊಟ್ಟರು. ಪೂಜಾ ಗೃಹವನ್ನು ಹೊಕ್ಕು ಸಾಷ್ಟಾಂಗ ನಮಸ್ಕಾರ ಹಾಕಿದೆ. ಭವ್ಯ ಆಕಾರದ ಗುರುಗಳು ಪೂಜೆಯ ಮಣೆಯ ಮೇಲೆ ಕುಳಿತಿದ್ದರು. ಕಂಚಿನ ಗಂಟೆಯಂತಹ ಕಂಠದಿಂದ ವಚನಗಳನ್ನು ಹೇಳುತ್ತ ಪೂಜೆಯನ್ನು ಆರಂಭಿಸಿದರು. ವಚನೋಕ್ತ ಇಷ್ಟಲಿಂಗ ಪೂಜೆ ನೋಡಿದುದು ಅದೇ ಮೊದಲ ಬಾರಿ. ನಮ್ಮ ತಾತ ಶಂಕ್ರಪ್ಪನವರು ವೈದಿಕ ಶಿವಪೂಜಾ ವಿಧಿ ಎನ್ನುವ ಪುಸ್ತಕ ಇಟ್ಟುಕೊಂಡು ಸಂಸ್ಕೃತ ಮಂತ್ರಗಳನ್ನು ಹೇಳುತ್ತ ಪೂಜೆಯನ್ನು ಮಾಡುತ್ತಿದ್ದರು. ಆ ಶ್ಲೋಕಗಳು ನಮಗೆ ಅರ್ಥವಾಗುತ್ತಿರಲಿಲ್ಲ. ಈಗಲೋ ಪೂಜ್ಯ ಗುರುಗಳ ಕಂಚಿನ ಕಂಠದಿಂದ ನೇರವಾಗಿ ನಾಟುವಂತೆ ಹೊರಬರುವ,ಸುಲಿದ ಬಾಳೆಯ ಹಣ್ಣಿನಂದದ ಸರಳವಾದ ವಚನ ವಾಕ್ಯಗಳು ಮೈ ಪುಳಕಿತಗೊಳಿಸುತ್ತಲಿದ್ದವು. ಅರ್ಥವನ್ನು ಆಸ್ವಾದಿಸುತ್ತ ನಾನು ತನ್ಮಯಳಾಗಿದ್ದೆ.

ಅಷ್ಟವಿಧಾರ್ಚನೆ, ಲಿಂಗಸ್ತವನ, ಲಿಂಗಾನುಸಂಧಾನ, ಲಿಂಗಧ್ಯಾನ, ಲಿಂಗತೀರ್ಥ ಪ್ರಸಾದ ಸ್ವೀಕಾರ ಎಂಬ ಐದೂ ಹಂತಗಳನ್ನು ಪೂರೈಸಿದ ಪೂಜ್ಯರು ಎದುರಿಗೆ ಕೂರಿಸಿಕೊಂಡು ನನ್ನ ಇಷ್ಟಲಿಂಗಕ್ಕೆ ಪೂಜೆಯನ್ನು ಮಾಡಿ, ನೆಟ್ಟ ದೃಷ್ಟಿಯಿಂದ ಅದನ್ನು ನೋಡಿ ಚಿತ್ಕಳೆ ತುಂಬಿದರು. ಲಿಂಗದ ಕಂಥೆಯ ಮಹತ್ವ ಗೊತ್ತಿರಲಿಲ್ಲವಾದ ಕಾರಣ ನಾನು ಪೂಜಿಸುತ್ತಿದ್ದ ಇಷ್ಟಲಿಂಗದ ಕಂಥೆ ಚೆನ್ನಾಗಿರಲಿಲ್ಲ, ಅಂದರೆ ಕಾಂತಿಯುಕ್ತವಾಗಿರಲಿಲ್ಲ.

"ಕಂಥೆ ಚೆನ್ನಾಗಿಲ್ಲ, ಬೇರೆ ಹೊಸ ಲಿಂಗು ಕೊಡೋಣವೆ?" ಎಂದು ಪೂಜ್ಯರು ಕೇಳಿದರು.

"ಬೇಡ, ನಾನು ಬಾಲ್ಯದಿಂದಲೂ ಪೂಜೆ ಮಾಡಿದ, ಹುಟ್ಟಿದಾಗ ಕಟ್ಟಿದ ಲಿಂಗು. ನಂತರ ಕಂಥೆ ಇಡಿಸಬಹುದು." ಎಂದು ನಾನು ನುಡಿದೆ.

ನನ್ನ ಎಡದ ಅಂಗೈಯಲ್ಲಿ ಪಂಚಕೋನ ಪ್ರಣವವನ್ನು ವಿಭೂತಿಯಿಂದ ಬರೆದರು. ಚಿತ್ಕಳೆ ತುಂಬಿದ ಇಷ್ಟಲಿಂಗವನ್ನು ಇಟ್ಟರು. ತಲೆಯ ಮೇಲೆ ಹಸ್ತವನ್ನಿಟ್ಟು ಷಡಕ್ಷರಿ ಮಂತ್ರವನ್ನು ಉಚ್ಚರಿಸಿ, ಹೇಳಿಸಿದರು. ಪೂಜ್ಯರು ತಲೆಯ ಮೇಲೆ ಹಸ್ತವನ್ನಿಡುತ್ತಲೇ ಶರೀರದಲ್ಲಿ ಮಿಂಚು ಹೊಡೆದಂತಾಯಿತು. ದೀಕ್ಷೆಯಲ್ಲಿ 3 ಅಂಗಗಳುಂಟು. ವೇಧಾ ದೀಕ್ಷೆ, ಮಂತ್ರದೀಕ್ಷೆ, ಕ್ರಿಯಾದೀಕ್ಷೆ ಎಂದು. ತಲೆಯ ಮೇಲೆ ಹಸ್ತವನ್ನಿಟ್ಟು ಅಂಗದಲ್ಲಿರುವ ಆತ್ಮಶಕ್ತಿಯನ್ನು ಜಾಗ್ರತಗೊಳಿಸುವುದೇ ವೇಧಾ ದೀಕ್ಷೆ, ಮಂತ್ರ ಉಚ್ಚರಣೆ ಮಂತ್ರ ದೀಕ್ಷೆ, ಕೈಯಲ್ಲಿ ಚಿತ್ಕಳೆ ತುಂಬಿದ ಇಷ್ಟಲಿಂಗವನ್ನು ಇಡುವುದೇ ಕ್ರಿಯಾದೀಕ್ಷೆ, ಗುರುವು ಅನುಗ್ರಹಿಸುವ ವಿಧಾನ ಮೂರು ರೀತಿ. ಒಂದು ಸ್ಪರ್ಶದಿಂದ ಇದಕ್ಕೆ ಕುಕ್ಕಟ ನ್ಯಾಯ ಎನ್ನುವರು; ಎರಡು - ದೃಷ್ಟಿಯ ಮೂಲಕ ಇದಕ್ಕೆ ಮತ್ಸ್ಯ ನ್ಯಾಯ ಎನ್ನುವರು; ಮೂರು - ಕೂರ್ಮ ನ್ಯಾಯ ಎನ್ನುವರು. ಗುರುವು ಶಿಷ್ಯನನ್ನು ಅನುಗ್ರಹಿಸುವ ಕ್ರಿಯೆಗೆ ಶಕ್ತಿಪಾತ ಎನ್ನಲಾಗುವುಹು. ಕುಕ್ಕುಟ ಅಂದರೆ ಕೋಳಿ, ಅದು ತನ್ನ ಮರಿಗಳನ್ನು ರೆಕ್ಕೆಯಲ್ಲಿಟ್ಟುಕೊಂಡು ವಾತ್ಸಲ್ಯ ತೋರುವುದಂತೆ. ಮತ್ಸ್ಯವು ದಿಟ್ಟಿಸಿ ನೋಡಿ ಕಣ್ಣಿನ ಮೂಲಕ ಅನುಗ್ರಹ ನೀಡುವುದಂತೆ; ಕೂರ್ಮ ಅಂದರೆ ಆಮೆಯು ಸಂಕಲ್ಪ ಮಾತ್ರದಿಂದ ಅನುಗ್ರಹ ನೀಡುವುದಂತೆ. ಹೀಗೆ ಗುರುವು ಹಸ್ತ- ಮಸ್ತಕ ಸಂಯೋಗದಿಂದ, ದೃಷ್ಟಿ ಮಾತ್ರದಿಂದ, ಸಂಕಲ್ಪದಿಂದ ಅನುಗ್ರಹಿಸುವ ವಿಧಾನವನ್ನು ಇಷ್ಟಲಿಂಗ ದೀಕ್ಷೆಯಲ್ಲಿ ಹುದುಗಿಸಲಾಗಿದೆ." ಎಂದು ಪೂಜ್ಯರು ವಿವರಿಸಿದ್ದನ್ನು ನಾನು ಲಕ್ಷ್ಯಗೊಟ್ಟು ಆಲಿಸಿದೆ. ಒಂದೊಂದು ಪದವೂ ನನ್ನ ಅಂತಃಶಕ್ತಿಯನ್ನು ಬಡಿದೆಬ್ಬಿಸುತ್ತಿತ್ತು.

(ಮುಂದುವರೆಯುವುದು...)

ಕೃತಿ ನೋಡಿದರೆ ಪಾತಾಳ ತಲ್ಪಿರುತ್ತದೆ. ಜಾತಿ ಡೊಂಬರು ಅನೇಕ ಕೈಚಳಕ, ಕಣ್ಕಟ್ಟು ಪ್ರದರ್ಶಿಸುವರು ಖಾಲಿ ಡಬ್ಬಿಯಿಂದ ನಾಣ್ಯಗಳನ್ನು ಉದುರಿಸುತ್ತಾರೆ. ಖಾಲಿ ಪಾತ್ರೆಯಿಂದ ನೀರು ಸುರಿಸುತ್ತಾರೆ. ಆದರೆ ಅವರೇನು ಸಿರಿವಂತರೆ? ಹಾಗೆ ಕೆಲವು ಧಾರ್ಮಿಕರು ಮಾತಿನಲ್ಲಿ ಸಿರಿವಂತರಾಗಿ, ಕೃತಿಯಲ್ಲಿ ದರಿದ್ರರಾಗಿರುತ್ತಾರೆ. ಇಂಥ ದ್ವಂದ್ವ ನಿಲುವಿನ ಭಕ್ತರನ್ನು ಕಂಡು ಲಿಂಗದೇವನು ವಿಡಂಬಿಸಿ ನಗುವನು.

652. ಬುದ್ಧಿ ಮಾತಿಗೆ ಸಿಟ್ಟಾಗಬಾರದು

ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ
ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ
ಲಿಂಗವಂತನು ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ
ಅವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ.
ಲಿಂಗಭಕ್ತನು ಲಿಂಗಪಥವ ಹೇಳಿದಡೆ
ಮಚ್ಚರಿಸುವವರ ಮೆಚ್ಚ ಲಿಂಗದೇವ. – ಬ.ವ.ದೀ 651

ವಿಶ್ವಗುರು ಬಸವಣ್ಣನವರ ಅಮೂಲ್ಯ ಸಂದೇಶಗಳಲ್ಲಿ ಒಂದು ಈ ವಚನದಲ್ಲಿ ಹುದುಗಿದೆ. ತಂದೆಯು ತನ್ನ ಮಕ್ಕಳು ತಪ್ಪು ಮಾಡುವಾಗ ಅವರಿಗೆ ಬುದ್ಧಿಯನ್ನು ಹೇಳುವನು. ಅವನ ಉದ್ದೇಶ ಮಕ್ಕಳು ತಪ್ಪನ್ನು ತಿದ್ದಿಕೊಂಡು ಉತ್ತಮರಾಗಬೇಕು ಎಂಬುದೇ ವಿನಾ ಅವರ ಪ್ರಾಣ ಹೋಗಬೇಕು ಎಂದಲ್ಲ, ಹಾಗೆ ಧಾರ್ಮಿಕ ಸಹೋದರತ್ವ ಹೊಂದಿದ ಲಿಂಗಾಯತರ ಒಕ್ಕೂಟ ಒಂದು ಪವಿತ್ರ ಕುಟುಂಬದಂತೆ. ಆಗ ಒಬ್ಬರು ತಪ್ಪು ಮಾಡಿದಾಗ ಇನ್ನೊಬ್ಬರು ತಿದ್ದಿ ಬುದ್ಧಿ ಹೇಳಿದಾಗ ಸಹ ಧರ್ಮೀಯರ ಕಳಕಳಿ ತಪ್ಪನ್ನು ತಿದ್ದುವುದಕ್ಕಾಗಿಯೇ ವಿನಾ ಆತ ಧರಿಸಿರುವ ಇಷ್ಟಲಿಂಗ, ವಿಭೂತಿ, ರುದ್ರಾಕ್ಷಿ ಮುಂತಾದ ಲಾಂಛನಗಳ ಮೇಲಲ್ಲ. ಆದ್ದರಿಂದ ಲಿಂಗಭಕ್ತನಾದ ಸಹ ಧರ್ಮಿಯು ತಾನು ನಡೆಯಬೇಕಾದ ದಾರಿಯ ಬಗ್ಗೆ ತಿಳಿ ಹೇಳಿದಾಗ ಕೋಪವನ್ನು ತಾಳುವುದಾಗಲೀ, ರೋಷದಿಂದ ವರ್ತಿಸುವುದಾಗಲೀ ಸರಿಯಲ್ಲ.

653. ಶರಣರ ಅನುಭಾವ ಮಡಿವಾಳನ ಕಾಯಕದಂತೆ

ಗುರೂಪದೇಶ ಮಂತ್ರವೈದ್ಯ; ಜಂಗಮೋಪದೇಶ ಶಸ್ತ್ರವೈದ್ಯ ನೋಡಾ,
ಭವರೋಗವ ಕಳೆವ ಪರಿಯ ನೋಡಾ
ಲಿಂಗದೇವನ ಶರಣರ ಅನುಭಾವ
ಮಡಿವಾಳನ ಕಾಯಕದಂತೆ – ಬ.ವ.ದೀ 652

ಗುರು ಮತ್ತು ಜಂಗಮ ಅಧ್ಯಾತ್ಮಿಕವಾಗಿ, ಬೌದ್ಧಿಕವಾಗಿ ಎರಡು ಸ್ತರದಲ್ಲಿ ಇರುವವರು. ಗುರುವು ಧರ್ಮದ ಸಾಮಾನ್ಯ ಜ್ಞಾನವನ್ನು ಹೊಂದಿರುವನು; ಜಂಗಮನು ಆಳವಾದ ಪಾಂಡಿತ್ಯ, ಪರಿಣತಿ ಹೊಂದಿರುವನು. ವೃತ್ತಿ ಭೇದದ ದೃಷ್ಟಿಯಿಂದ ಗುರುವು ಒಂದು ಕಡೆ ನೆಲೆಸಿರುವವನಾದರೆ ಜಂಗಮನು ಸದಾ ಸಂಚಾರಿ. ಹರಿಯುವ ನದಿಯಂತೆ ಸದಾ ಸಂಚರಿಸುತ್ತ ಜ್ಞಾನವನ್ನು ನೀಡುವ ಜ್ಞಾನ ತರಂಗಿಣಿ ಜಂಗಮ. ಗುರುವು ತಾನಿದ್ದ ಸ್ಥಳದಲ್ಲಿ ಬೋಧೆ ಮಾಡುತ್ತ ಧರ್ಮಜ್ಞಾನವನ್ನು

"ನಿಜ, ಆದರೆ ಬಂದು ಹೋಗಿ ಮಾಡುವುದಿರುತ್ತದೆ. ಮಗಳು ಗಂಡನ ಮನೆಯಲ್ಲಿ ಸುಖವಾಗಿದ್ದಾಳೆ ಎಂಬ ಸಮಾಧಾನವಿರುತ್ತದೆ." ತಾತಂದಿರ ಜೊತೆ ಬಂದಿದ್ದ ವೀರಮ್ಮಜ್ಜಿ ಹೇಳಿತು.

"ಗುರುಗಳ ಆಶ್ರಯದಲ್ಲಿ ಪರಮಾತ್ಮನ ಅನುಗ್ರಹದಲ್ಲಿ ಮಗಳು ಸುಖವಾಗಿದ್ದಾಳೆ ಎಂದು ಭಾವಿಸಿಕೊಳ್ಳಿರಿ."

"ಒಂದು ದಿನವಾದರೂ ಎದುರು ನಿಂತು ಮಾತನಾಡಿದವಳಲ್ಲ. ಈವತ್ತು ಎಷ್ಟು ಎದುರು ಮಾತನಾಡುತ್ತಿದ್ದೀಯ! ಯಾರು ಕಲಿಸಿಕೊಟ್ಟರು? ತುಂಬ ಉದ್ಧಟತನ" ತಾತ ಶಿವಣ್ಣ ಕೋಪದಿಂದ ಮೂಗು ಅರಳಿಸಿಕೊಂಡು ಕೇಳಿದರು.

"ಇದು ನನ್ನ ವೈಯಕ್ತಿಕ ನಿರ್ಧಾರ. ಯಾರೂ ಕಲಿಸಿಕೊಡಬೇಕಾಗಿಲ್ಲ, ಉದ್ಧಟತನವಲ್ಲ ದಿಟ್ಟತನ."

"ಒಂದು ವೇಳೆ ಸನ್ಯಾಸಿಯಾಗಲೇ ಬೇಕೆಂದಿದ್ದರೆ ಮನೆಯಲ್ಲಿದ್ದೇ ಆಗಬಹುದು. ಆಗ ಜನಾಪವಾದವು ಬರುವುದಿಲ್ಲ." ತಾತ ಶಂಕ್ರಪ್ಪನವರ ಅಭಿಪ್ರಾಯ

"ಬತ್ತದ ಸಸಿಗಳನ್ನು ಮೊದಲು ಮಡಿಯಲ್ಲಿ ಬೆಳೆಸುವರು. ಅಲ್ಲೇ ಬಿಡುವುದಿಲ್ಲ. ಸಸಿಯನ್ನು ಕಿತ್ತು ವಿಶಾಲವಾದ ಗದ್ದೆಯಲ್ಲಿ ಹಚ್ಚುವರು. ಸನ್ಯಾಸಿಯ ಪ್ರತಿಭೆ ಸಂಸಾರದ ಮಡಿಯಲ್ಲಿ ಹುಟ್ಟಿದರೂ ಅದು ಜಗತ್ತಿನ ಕಾರ್ಯಕ್ಷೇತ್ರವನ್ನು ಪ್ರವೇಶಿಸಬೇಕು. ಪೂರ್ವಾಶ್ರಮದ ಮಡಿಯಲ್ಲೇ ಉಳಿಯಬಾರದು." ನನ್ನ ಉತ್ತರ.

"ಬಹಳ ಬುದ್ಧಿವಂತಳಾಗಿ ಬಿಟ್ಟೆ. ಗುರುಗಳೇ, ನಮ್ಮ ಮೊಮ್ಮಗಳನ್ನು ಮನೆಗೆ ಕಳಿಸಿರಿ. ನೀವು ಮನೆಗೆ ಹೋಗಲು ಹೇಳಿರಿ. ನಿಮ್ಮ ಮಾತನ್ನು ಮೀರುವುದಿಲ್ಲ, ಮೀರಬಾರದು."

"ಇದರಲ್ಲಿ ನಮ್ಮ ಪಾತ್ರವೇನೂ ಇಲ್ಲ, ಬಂದವರಿಗೆ ಆಶ್ರಯ ಕೊಡುವುದು ನಮ್ಮ ಧರ್ಮ. ಬಂದರೆ ಕರೆದುಕೊಂಡು ಹೋಗಿರಿ...." ಗುರುಗಳು ಹೇಳಿದರು.

"ಹೋಗಲೇಬೇಕೆಂದು ಆಜ್ಞೆ ಮಾಡಿರಿ."

"ಹೌದಮ್ಮ, ಅವರು ಕರೆಯಲು ಬಂದಿದ್ದಾರೆ, ಹೋಗು...." ಗುರುಗಳು ಹೇಳಿದರು.

"ನೀವು ಕಳಿಸಿದರೆ ಸರಿಯಾಯ್ತು, ಇಲ್ಲದಿದ್ದರೆ ನಿಮ್ಮ ಮೇಲೆ ಕಿಡ್ನಾಪ್ (ಅಪಹರಣದ) ಕೇಸ್ ಹಾಕುತ್ತೇವೆ." ವಕೀಲ ತಾತ ಬೆದರಿಕೆ ಒಡ್ಡಿದರು. ಆಗ ನಾನು ಸ್ವಲ್ಪ ಅಧೀರಳಾದೆ. ಕಾನೂನು ನನಗೆ ಗೊತ್ತಿರಲಿಲ್ಲ. ನನ್ನಿಂದ ಗುರುಗಳಿಗೆ ತೊಂದರೆ (ಶಿಕ್ಷೆ) ಆಗಬಾರದಲ್ಲ ಎಂದು ಕ್ಷಣಕಾಲ ಚಿಂತಿಸಿದೆ.

"ಆಗಲಿ ಗುರುಗಳೇ, ನಾನು ಹೋಗುತ್ತೇನೆ, ಆದರೆ 2 ಕರಾರುಗಳಿವೆ. ಒಂದು, ನನಗೆ ಬಲವಂತವಾಗಿ ಮದುವೆ ಮಾಡಬಾರದು. ಮತ್ತು ದೀಕ್ಷೆ ಪಡೆದುಕೊಳ್ಳಲು ಅವಕಾಶ ನೀಡಬೇಕು. ಬೆಳಗ್ಗೆ ದೀಕ್ಷೆ ಪಡೆದುಕೊಂಡು ನಾಳೆ ಮನೆಗೆ ಹೋಗುತ್ತೇನೆ."

"ನೀವು ಏನಂತೀರಿ....?" ಗುರುಗಳು ಕೇಳಿದರು.

"ಆಗಲಿ, ಆಕೆಯ ಇಷ್ಟಕ್ಕೆ ವಿರುದ್ಧವಾಗಿ ಮದುವೆ ಮಾಡುವುದಿಲ್ಲ. ಆಗಲೇ ದೀಕ್ಷೆಯಾಗಿದೆ. ಇನ್ನೆಂಥಾ ದೀಕ್ಷೆ?" ತಾತನವರು ಎಂದರು.

"ಮೊದಲು ಯಾಂತ್ರಿಕವಾಗಿ ದೀಕ್ಷೆಯಾಗಿದೆ. ಆಧ್ಯಾತ್ಮಿಕ ಗುರುಗಳಿಂದ ಪಡೆಯಬೇಕಾಗಿದೆ." ನಾನು ಹೇಳಿದೆ. ಋತುಮತಿಯಾಗಿದ್ದಾಗ ಸಂಪ್ರದಾಯದಂತೆ ದೀಕ್ಷೆ ಮಾಡಿಸಿದ್ದರು.

ತಪಸ್ಸು ಮಾಡಿದ ಆದರೂ ದರ್ಶನವಾಗಲಿಲ್ಲ ತನ್ನ ತಲೆಯನ್ನು ಕತ್ತರಿಸಲು ಅರ್ಪಿಸುಲು ಮುಂದಾದ. ಆಗ ಶಿವನ ದರ್ಶನ ಪ್ರಾಪ್ತಿಯಾಯಿತು. ಒಮ್ಮೆ ಒಂದು ಕಪಿಯು ಗಿಡದ ಮೇಲೆ ಮರಿ ಹಾಕಿತು ಅದರ ಮಾಸವು ಒಣಗಿ ಮೇಲೆ ತೂಗಾಡುತ್ತಾ ನಾದವನ್ನು ಉಂಟು ಮಾಡುತ್ತಿತ್ತು ಆ ನಾದವನ್ನು ಶಿವ ಪಾರ್ವತಿಯರು ತನ್ಮಯರಾಗಿ ಆಲಿಸುತ್ತಿರುವುದನ್ನು ತಿಳಿದು ಶಿವನು ನಾದಪ್ರಿಯ ಎಂದು ಮನವರಿಕೆ ಮಾಡಿಕೊಂಡ ರಾವಣನು ತನ್ನ ಕರುಳನ್ನೇ ತಂತಿಯಾಗಿ ಮಾಡಿ ಹಾಡಿ, ಶಿವನನ್ನು ಒಲಿಸಿಕೊಂಡನು. ವಿನಾಶಕ್ತಿರಾಯನೆಂಬ ರಾಜನು ಸಂಸಾರದಲ್ಲಿ ಬೇಸತ್ತು ವೈರಾಗ್ಯ ತಾಳಿ ಜ್ಞಾನವನ್ನು ಅರಸುತ್ತಿರುವಾಗ ಒಂದು ಜಿಂಕೆಯು ಆತನಿಗೆ ಉಪದೇಶ ಮಾಡಿತು. ಅದರ ಉಪದೇಶದಂತೆ ಆಚರಿಸಿ ಮುಕ್ತಿ ಮಾರ್ಗವನ್ನು ಆತ ಕಂಡುಕೊಂಡ; ಶ್ವೇತ ಎಂಬುವವನು ವಿಲಾಸಿ, ಪಾಪಿ, ವಿಷಯ ಲಂಪಟ ಅವನು ಮಾಡಿದ ಕಿಂಚಿತ್ ಪುಣ್ಯದಿಂದ ಒಂದು ದಿನದ ಮಟ್ಟಿಗೆ ಸ್ವರ್ಗ ಪ್ರಾಪ್ತಿಯಾಯಿತು. ಅವನ ಬಯಕೆ ಏನೆಂದು ಕೇಳಿದಾಗ ಆ ಒಂದು ದಿನದ ಮಟ್ಟಿಗೆ ರಂಭೆಯೊಡನೆ ಸುಖಿಸುವುದು ಎಂದ. ಆಗ ರಂಭೆ ಹೇಳಿದಳು, "ಯಾವುದೊ ಪುಣ್ಯದಿಂದ ಸ್ವರ್ಗ ಪ್ರಾಪ್ತಿಯಾಗಿದೆ. ಇದರ ಬಲದಿಂದ ಇನ್ನಷ್ಟು ಪುಣ್ಯವನ್ನು ಸಂಪಾದಿಸಿಕೊ. ವಿಷಯಾಸಕ್ತಿಯಿಂದ ಜೀವನವನ್ನು ಹಾಳು ಮಾಡಿಕೊಳ್ಳಬೇಡಿ" ಎಂದು ಬೋಧೆ ಮಾಡಿದಳು. ಇದರಿಂದ ತಿಳುವಳಿಕೆ ಪಡೆದ ಶ್ವೇತನು ಶಿವಧ್ಯಾನವನ್ನು ಮಾಡಿ ಶಿವಲೋಕವನ್ನು ಪ್ರವೇಶಿಸಿ ಶಂಭುವಿನ ಓಲಗದಲ್ಲಿ ಕುಳಿರ್ದನು. ಹೀಗೆ ಪಶು ಪಕ್ಷಿಗಳಿಂದ ಉಪದೇಶ ಪಡೆದ ಜನರೇ ಉತ್ತಮ ಸ್ಥಿತಿಯನ್ನು ಪಡೆದರೆಂದಾಗ ಜ್ಞಾನಿಗಳಾದ ಲಿಂಗದೇವನ ಶರಣರ ಉಪದೇಶ ಪಡೆದವರ ದುರಿತ ಪಾಪಂಗಳು ಬಿಟ್ಟು ಹೋಗಿ ಲಿಂಗದಲ್ಲಿ ಮನಸ್ಸು ನಿರತರಾಗಿಪ್ಪರು.

655. ಭ್ರಮೆ ನಿರಸನ

ಶಿವಚಿಂತೆ ಶಿವಜ್ಞಾನ ಭ್ರಮೆ ತಿಳಿದವಂಗಲ್ಲದೆ
ಆಚಾರ ಶಿವಾಚಾರ ತಮತಮಗೆ ಸೂರೆಯೆ,
ಲಿಂಗದೇವನ ನೆರೆ ಪೂಜಿಸಿದವಂಗಲ್ಲದೆ ? – ಬ.ವ.ದೀ 654

ಹೆಚ್ಚಿನ ಮಾನವನು ಭ್ರಮಾಧೀನರಾಗಿ ದೇವರನ್ನು ನಂಬದೆ, ಧರ್ಮದ ಆಶ್ರಯ ಹೊಂದದೆ ವಿಷಯಾಸಕ್ತರಾಗಿ, ಸಂಸಾರ ಮೋಹಿಗಳಾಗಿ ಬಾಳುವರು. ಅವರಿಗೆ ಶಿವಚಿಂತೆ, ಶಿವಜ್ಞಾನ ಅರ್ಥರಹಿತವಾಗಿ ತೋರುತ್ತವೆ. ಭ್ರಮೆ ಹರಿದಾಗ ಅವರ ಮನಸ್ಸು ಶಿವಚಿಂತೆ, ಶಿವಜ್ಞಾನದ ಕಡೆಗೆ ಹರಿಯುತ್ತದೆ. ಆಚಾರವನ್ನು ಪಾಲಿಸಬೇಕೆಂಬ ಆಸಕ್ತಿ ಮೂಡುತ್ತದೆ. ಶಿವಾಚಾರವು ಅಳವಡುತ್ತದೆ. ಲಿಂಗದೇವನನ್ನು ಪೂಜಿಸಲು ಆರಂಭಿಸಿದಾಗ ಭ್ರಮೆಯ ಪೊರೆ ಹರಿದು ಆಚಾರವು ಅಳವಡಲಾರಂಭಿಸುತ್ತದೆ.

656. ಭಾವ ಶುದ್ಧಿ ಮುಖ್ಯ

ಕಟ್ಟಿದಡೇನು, ಮುಟ್ಟಿದಡೇನು, ಹೂಸಿದಡೇನು ಮನಮುಟ್ಟದನ್ನಕ್ಕ?
ಭಾವಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು,
ಲಿಂಗದೇವನೊಲಿದವಂಗಲ್ಲದೆ. – ಬ.ವ.ದೀ 655

ಮುಂದೆ ನನ್ನದೇನು? ಎಂದು ಆಲೋಚಿಸಿದೆ. ಕುವೆಂಪುರವರ ಮಹಾರಾತ್ರಿ ನಮಗೆ ಪಿ.ಯು.ಸಿ ಯಲ್ಲಿ ಪಠ್ಯವಾಗಿತ್ತು. ಆ ಪ್ರಸಂಗ ನನ್ನ ಮೇಲೆ ಬಹಳ ಪರಿಣಾಮ ಬೀರಿತ್ತು. ಇನ್ನು ಹೆಚ್ಚುಕಾಲ ಇದ್ದರೆ ಮನಸ್ಸು ಸಡಿಲಗೊಳ್ಳಬಾರದೆಂದು, ಮನಸ್ಸನ್ನು ಗಟ್ಟಿಗೊಳಿಸಿಕೊಂಡು ಹೊರಟು, ಬಸ್ ಸ್ಟ್ಯಾಂಡಿಗೆ ಬಂದೆ.

ಎಲ್ಲಿಗೆ ಹೋಗಬೇಕೆಂದು ನಿರ್ಧರಿಸಿಕೊಂಡಿರಲಿಲ್ಲವಾದರೂ ಪೂಜ್ಯ ಲಿಂಗಾನಂದ ಸ್ವಾಮಿಗಳು ಬರೆದ ಪುಸ್ತಕಗಳು ಮುಖ್ಯವಾಗಿ ಅಕ್ಕನ ಪ್ರವಚನ ನನ್ನ ಜೀವನದ ದಿಕ್ಸೂಚಿ ಯಾಗಿದ್ದರಿಂದ ಪೂಜ್ಯ ಸ್ವಾಮಿಗಳನ್ನು ಕಂಡು ಆಶ್ರಯ, ಮಾರ್ಗದರ್ಶನ ಕೋರಬೇಕೆಂದು ಮಾಡಿದ್ದೆ. ಇನ್ನೂ ಕತ್ತಲಿತ್ತು, ಪೂಜೆ ಮುಗಿಸಿ ಬೇಗನೆ ಹೊರಟು ಬಿಟ್ಟಿದ್ದೆ. ನಂದಿ ಮೋಟಾರ್ ಸರ್ವೀಸ್ ಎಂಬ ಒಂದು ಬಸ್ ನಿಂತಿದ್ದು, ದಾವಣಗೆರೆ ಎಂದು ಅದರ ಮೇಲೆ ಫಲಕವಿತ್ತು. ಒಳಗೆ ಹೋಗಿ ಕುಳಿತುಕೊಂಡೆ. ದಾವಣಗೆರೆಗೆ ಹೋಗಿ ರಿಕ್ಷಾ ತೆಗೆದುಕೊಂಡು ವಿನೋಬಾ ನಗರಕ್ಕೆ ಹೋದೆ. "ವಿಶ್ವಕಲ್ಯಾಣ ಮಂಟಪ - ಲಿಂಗಾನಂದ ಸ್ವಾಮಿಗಳ ಆಶ್ರಮ" ಎಂದು ಕೇಳಿದಾಗ ಒಂದು ಆಶ್ರಮ ತೋರಿಸಿದ್ದರು. ಅವರ ದರ್ಶನ ಪಡೆದೆ. ಅವರ ಹೆಸರೂ ಅದೇ ಇತ್ತು. ಅದು ವೇದಾಂತದ ಆಶ್ರಮ. 'ಇಲ್ಲೇ ಎದುರಿಗೆ ಆ ಲಿಂಗಾನಂದ ಸ್ವಾಮಿಗಳ ಆಶ್ರಮವಿದೆ' ಎಂದು ಸ್ವಾಮೀಜಿ ತಿಳಿಸಿದರು. ರಿಕ್ಷಾದಲ್ಲಿ ಹೋಗಿ ಇಳಿದು ಕುಳಿತಿದ್ದೆ. ಬೆಳಿಗ್ಗೆ 10 ಗಂಟೆಯಾಗಿತ್ತು. ಪೂಜ್ಯ ಸ್ವಾಮೀಜಿ ಸ್ನಾನ - ಪೂಜೆ - ತ್ರಾಟಕ ಯೋಗ- ಉಪಾಹಾರ ಮುಗಿಸಿ ಬಂದರು. ತುಂಬಾ ಸಂಭ್ರಮ - ಸಂತೋಷದಿಂದ ನಮಸ್ಕರಿಸಿದೆ. ಅಕ್ಕನ ವಚನಗಳು ಬಾಯಿ ಪಾಠವಾಗಿದ್ದವು.

ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ
ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು ನೋಡಾ.
ಇದೇ ಎನಗೆ ಇಹದ ಸುಖ, ಪರದ ಗತಿ ನಡೆದು ಬಂದಂತಾಯಿತ್ತೆನಗೆ
ಚನ್ನಮಲ್ಲಿಕಾರ್ಜುನಾ,
ಗುರುಪಾದವ ಕಂಡು ಧನ್ಯಳಾದೆನು

ಎಂದು ಹೇಳುತ್ತ ನಮಸ್ಕಾರ ಮಾಡಿದೆ.

"ನೀವು ಚಿತ್ರದುರ್ಗದಲ್ಲಿ ಭೇಟಿ ಮಾಡಿ ಚರ್ಚಿಸಿದವರಲ್ಲವೆ?" ಗುರುಗಳ ಪ್ರಶ್ನೆ. ಒಂದೇ ಒಂದು ಬಾರಿ ನೋಡಿದ್ದ ನನ್ನನ್ನು ನೆನಪಿಟ್ಟದ್ದು ಕಂಡು ಆಶ್ಚರ್ಯವೆನಿಸಿತು. ನನ್ನ ಉದ್ದೇಶ, ನಮ್ಮ ಮನೆಯವರ ವಿರೋಧ ಎಲ್ಲವನ್ನೂ ಸಂಕ್ಷಿಪ್ತವಾಗಿ ಹೇಳಿದೆ.

"ನಿಮ್ಮ ಉದ್ದೇಶ ಚನ್ನಾಗಿದೆ. ಆದರೆ ಶ್ರೀಮಂತರಾದ ನಿಮ್ಮ ಮನೆಯವರು ಸನ್ಯಾಸಿಯಾಗಲು ಬಿಡುವರೆ?"

"ನೀವು ಆಶ್ರಯ ನೀಡಿ ಮಾರ್ಗದರ್ಶನ ಮಾಡಿದರೆ ನನ್ನ ಗುರಿ ಈಡೇರದಿರದು."

"ನಿಮ್ಮಂತಹ ಸಾಧಕರಿಗಾಗಿಯೇ ಈ ಆಶ್ರಮ ತೆರೆದಿರುವುದು." ಗುರುಗಳು ನುಡಿದರು.

"ನಿಮ್ಮ ಮನೆಯವರು ಕರೆಯಲು ಬಂದಾಗ ನೀವು ಉತ್ತರಿಸಿರಿ. ಈಗ ಹೋಗಿ ಸ್ನಾನ ಪೂಜೆ ಮಾಡಿಕೊಳ್ಳಿ" ಎಂದರು.

ಸುಮಾರು 9 ಎಕರೆ ವಿಸ್ತಾರವಾದ ಜಮೀನಿನಲ್ಲಿ ಕೆಂಪು ಹೆಂಚು ಹೊದಿಸಿದ ಒಂದು ಸರಳವಾದ

658. ಅಸಹಜ ಪ್ರಯತ್ನ ಸಲ್ಲದು

ನಿಧಾನವನರಸಿಹೆನೆಂದು ಹೋದಡೆ, ವಿಘ್ನ ಬಪ್ಪುದು ಮಾಣ್ಬುದೆ?
ಸದಾಶಿವನೆಂದಡೆ ಬೆದರಟ್ಟಿ ಸುಡುವುದು ಮಾಣ್ಬುದೆ?
ಹದುಳಿಗನಾಗಿ ಉಳಿದಡೆ ಪದವನೀವ ಕಾಣಾ, ಲಿಂಗದೇವ

– ಬ.ವ.ದೀ 657

ಕೆಲವರು ನಿಧಿಯನ್ನು ಹುಡುಕುತ್ತೇವೆಂದು ದೇವಾಲಯಗಳ ಬಳಿ ಇನ್ನೂ ಅನೇಕ ಕಡೆ ಹುಡುಕುವರು. ಮತ್ತೆ ಕೆಲವರು ಶ್ರೀಮಂತಿಕೆಯನ್ನು ಪಡೆಯಬೇಕೆಂದು ದೇಶಾಂತರ ಹೋಗುವರು ಇಂಥ ಎಲ್ಲ ಪ್ರಯತ್ನ ಮಾಡುವಾಗ ಸಾಕಷ್ಟು ವಿಘ್ನಗಳು ಬರುವುದುಂಟು. ಕೈಯಲ್ಲಿ ಸುಡುವ ಕಟ್ಟಿಗೆಯನ್ನು ಹಿಡಿದುಕೊಂಡು ಸದಾಶಿವನೆಂದು ದೇವರ ಧ್ಯಾನ ಮಾಡಿದರೆ ಅದು ಸುಡುವುದನ್ನು ಬಿಡುವುದೆ ? ಇಂಥ ಅಸಹಜ ಪ್ರಯತ್ನಗಳನ್ನು ಮಾಡದೆ ಸದ್ಭಾವನೆಯ ಮನಸ್ಸನ್ನು ಹೊಂದಿದರೆ ಸಾಕು, ಲಿಂಗದೇವನು ಒಲಿಯುವನು.

659. ಆಣೆ ಮಾಡಬಾರದು

ಅಡಿಗಡಿಗೆ ದೇವರಾಣೆ, ಅಡಿಗಡಿಗೆ ಭಕ್ತರಾಣೆ
ಅಡಿಗಡಿಗೆ ಗುರುವಿನಾಣೆ ಎಂಬ ವಚನವೆ? ಹೊಲ್ಲ!
ಮುಂದೆ ಶಿಪಥಕ್ಕೆ ಸಲ್ಲರು.
ಆದಿಯಿಂದ ಬಂದ ವಚನವೆಂದು ಶರಣರ ಕೂಡೆ ಸರಸವಾಡಿದಡೆ,
ನಗುತಲಿರಿದುಕೊಂಡಡೆ ಅಲಗು ನೆಡದಿಹುದೆ ಲಿಂಗದೇವಾ?

– ಬ.ವ.ದೀ 658

ಕೆಲವರು ಮಾತು ಮಾತಿಗೆ ದೇವರಾಣೆ, ಭಕ್ತರಾಣೆ, ಗುರುವಿನಾಣೆ ಎಂದು ಆಣೆ ಇಡುವರು. ಇದು ತಪ್ಪು ಇವರು ಶಿವಪಥಕ್ಕೆ ಸಲ್ಲರು, ಹಿಂದಿನಿಂದ ಬಂದಿರುವ ರೂಢಿ ಎಂದು ಶರಣರ ಕೂಡ ಆಣೆ ಇಟ್ಟು ಮಾತನಾಡಿದರೆ, ಇದು ಅನಾಹುತಕಾರಿ, ಕೆಲವರು ತಮಾಷೆಗಾಗಿ ಆಣೆ ಇಟ್ಟು ಸುಳ್ಳನ್ನು ಪ್ರತಿಪಾದಿಸುವರು. ಇಂಥ ನಡೆ ಹೇಗೆಂದರೆ ನಗು ನಗುತ್ತ ಕತ್ತಿಯಲ್ಲಿ ಇರಿದುಕೊಂಡಂತೆ, ಚೂಪಾದ ಕತ್ತಿಯ ತುದಿ ನೆಡದೆ ಇರುವುದೆ?

660. ಶರಣರೊಡನೆ ಸರಸ ಬೇಡ

ಅರಗಿನ ಪುತ್ಥಳಿಯ ಉರಿಯ ನಾಲಿಗೆ ಹೊಯಿದು
ಮಾತನಾಡುವ ಸರಸ ಬೇಡ!
ಬೆಣ್ಣೆಯ ಬೆನಕಂಗೆ ಕೆಂಡದುಂಡಲಿಗೆಯ ಮಾಡಿ
ಚಲ್ಲವಾಡಿದಡೆ ಹಲ್ಲು ಹೋಹುದು!
ಲಿಂಗದೇವನ ಶರಣರೊಡನೆ ಸರಸವಾಡಿದಡೆ
ಅದು ವಿರಸ ಕಾಣಿರಯ್ಯಾ!

– ಬ.ವ.ದೀ 659

ಸ್ವರೂಪ. ಸತ್- ಶುದ್ಧ ಇರುವಿಕೆ, ಚಿತ್-ಶುದ್ಧ ಜ್ಞಾನ, ಆನಂದ - ಶುದ್ಧ ಆನಂದ ಇದು ದೇವರ ಸ್ವರೂಪ. ಈ ವಿವರಣೆ, ತನ್ಮೂಲಕ ಸಚ್ಚಿದಾನಂದ ಪದದ ಮಹತಿ ತಿಳಿಸು ಆ ಪದ ಮನದಲ್ಲಿ ಅಚ್ಚೊತ್ತಿತ್ತು. ಹೀಗಾಗಿ ನನ್ನ ಪ್ರೀತಿಯ ಪತಿಗೆ "ಸಚ್ಚಿದಾನಂದ" ಎಂದು ಹೆಸರಿಟ್ಟುಕೊಂಡೆ.

ಪೂಜ್ಯರನ್ನು ದರ್ಶಿಸಿದುದು ಫೆಬ್ರವರಿಯಲ್ಲಿ, ಮಾರ್ಚ್ - ಏಪ್ರಿಲ್‌ಗಳಲ್ಲಿ ಬದಲಾವಣೆ.. ಹಂಬಲ ಉತ್ಕಟವಾದರೂ ಅದನ್ನು ಹತ್ತಿಕ್ಕಿಕೊಂಡು ಪರೀಕ್ಷೆಗಾಗಿ ಓದಿದೆ. ಪರೀಕ್ಷೆ ಮುಗಿಯುತ್ತಲೇ ಬಹುಕಾಲ ಉಪವಾಸ ಬಳಲಿದವನು ಭಕ್ಷ್ಯ-ಭೋಜ್ಯಗಳನ್ನು ಕಂಡಾಗ ಗಬಗಬ ತಿನ್ನುವಂತೆ ಶರಣ ಸಾಹಿತ್ಯವನ್ನು ಓದ ತೊಡಗಿದೆ. ಶರಣ. ಸಿದ್ಧಯ್ಯ ಪುರಾಣಿಕರ ಶರಣ ಚರಿತಾಮೃತ, ಡಾ|| ತಿಪ್ಪೇರುದ್ರಸ್ವಾಮಿಯವರ ಕದಳಿಯ ಕರ್ಪೂರ ನನ್ನ ಅಧ್ಯಾತ್ಮಿಕ ಚಿಂತನೆಯ ದೀವಿಗೆಗೆ ಎಣ್ಣೆಯನ್ನೆರೆದವು. ಪರೀಕ್ಷೆಯ ನಂತರ ಬೆಳಗಿನ ಜಾವ ಮೂರು ಗಂಟೆಗೆ ಎದ್ದು ತಣ್ಣೀರು ಸ್ನಾನ ಮಾಡಿ, ಇಷ್ಟಲಿಂಗ ಪೂಜೆ ಮಾಡತೊಡಗಿದೆ. ನನ್ನ ಬಗ್ಗೆ ಅಲ್ಲಿಯವರೆಗೆ ತುಂಬಾ ಪ್ರೀತಿ ಅಭಿಮಾನವಿದ್ದ ತಾತ ಶಂಕರಪ್ಪನವರು ನನ್ನ ಈ ಬದಲಾವಣೆ ಕಂಡು ಕ್ರುದ್ಧರಾದರು. "ಭಿಕಾರಿಯಂತೆ ಬಟ್ಟೆ ಉಡುತ್ತಾಳೆ, ಒಡವೆಗಳನ್ನೆಲ್ಲ ತೆಗೆದು ರುದ್ರಾಕ್ಷಿ ಹಾಕಿದ್ದಾಳೆ. ಏನು ಗತಿ ಇಲ್ಲದವರ ಮನೆಯ ಹುಡುಗಿಯಂತಿದ್ದಾಳೆ. ಇದು ನಮ್ಮ ಮನೆತನಕ್ಕೇ ಅವಮಾನ ! ಏನಮ್ಮ ಗಂಗಮ್ಮ ನೀನಾದರೂ ನಿನ್ನ ಮಗಳಿಗೆ ಬುದ್ಧಿ ಹೇಳಬಾರದಾ?" ಎಂದು ತಾಯಿಯವರ ಮೇಲೆ ಹಾರಾಡುತ್ತಿದ್ದರು. ಬಿಎಸ್‌ಸಿ ಫಲಿತಾಂಶ ಬಂದಿತು. ತೇರ್ಗಡೆಯಾಗಿತ್ತು. ನನಗೆ ಎಂ.ಎಸ್‌ಸಿ ಓದಬೇಕೆಂಬ ಇಚ್ಛೆ ಇತ್ತು. ಇದು ಮುಖ್ಯವಾಗಿ ಓದುವ ಉದ್ದೇಶದಿಂದಲ್ಲ. ಮದುವೆಯ ವಿಚಾರ ಆಗಾಗ ಏಳುತ್ತಿದ್ದರಿಂದ ಅದನ್ನು ಮುಂದೂಡಲು ಮತ್ತು ಮನೆಯ ಬಂಧನವನ್ನು ಕಳಚಿಕೊಳ್ಳಲು. ಒಂದು ದಿನ ತಾತ ಶಂಕರಪ್ಪ, ಅಜ್ಜಿ ವೀರಮ್ಮ ಎಲ್ಲರೂ ಸೇರಿದ್ದರು. "ಫಲಿತಾಂಶ ಬಂದಿದೆ. ಮುಂದೆ ಎಂ.ಎಸ್‌ಸಿ ಓದುತ್ತೇನೆ." ಎಂದು ಪ್ರಸ್ತಾಪಿಸಿದೆ.

"ಇಲ್ಲ, ಮುಂದೆ ಓದಿಸುವುದಿಲ್ಲ. ಮದುವೆಯಾಗಿ ಬೇಕಾದರೆ ಮುಂದೆ ಓದು." ಎಂದು ತಾತಾ ಹೇಳಿದರು. "ಇನ್ನು ವರ ಹುಡುಕಬೇಕು." ಎಂದರು ವೀರಮ್ಮಜ್ಜಿ.

ಒಂದು ನಿರ್ಧಾರಕ್ಕೆ ಬರಲೇಬೇಕಾದ ಅನಿವಾರ್ಯತೆ ಎದುರಾಯಿತು. ನಾನು ಹೇಳಿದೆ,

"ಇಲ್ಲ, ನಾನು ಮದುವೆಯಾಗುವುದಿಲ್ಲ...

"ಮತ್ತೇನು ಸನ್ಯಾಸಿಯಾಗುತ್ತೀಯಾ?" ಎಂದು ಗರ್ಜಿಸಿದರು.

"ಅಹುದು, ಸನ್ಯಾಸಿಯಾಗುತ್ತೇನೆ." ದೃಢ ಧ್ವನಿಯಲ್ಲಿ ಹೇಳಿದೆ.

"ಇಲ್ಲ, ಅದಕ್ಕೆಲ್ಲ ಅವಕಾಶವಿಲ್ಲ; ನಮ್ಮ ಮನೆತನದ ಗೌರವದ ಪ್ರಶ್ನೆ"

"ನಾನು ಸನ್ಯಾಸಿಯಾದರೆ ಮನೆತನದ ಗೌರವ ಏಕೆ ಹೋಗುತ್ತದೆ?" ನನ್ನ ಪ್ರಶ್ನೆ

"ಇಂದು ಸೋಮವಾರ, ನಾನು ಗುರುವಾರ ಬರುತ್ತೇನೆ. ನೀನು ಒಪ್ಪಿಗೆ ಕೊಡಬೇಕು. ಒಂದಿಬ್ಬರು ನೋಡಲು ಬರುವವರಿದ್ದಾರೆ. ಅವರಿಗೆ ಬರಲು ಹೇಳಬೇಕು. ಗುರುವಾರ ನಾನು ಬಂದಾಗ ನೀನು ಒಪ್ಪಿಗೆ ನೀಡದಿದ್ದರೆ ವಿಷ ತರುತ್ತೇನೆ. ನನಗಾದರೂ ಕುಡಿಸಬೇಕು, ಇಲ್ಲವೇ ನೀನಾದರೂ ಕುಡಿಯಬೇಕು." ಎಂದು ವೀರಮ್ಮಜ್ಜಿ ಖಂಡತುಂಡವಾಗಿ ಹೇಳಿದರು. ನನ್ನಲ್ಲಿ ಗಂಭೀರ ಚಿಂತನೆ

ಇರುವವೆ? ಹಾಗೆ ಶರಣರೊಡನೆ ಸರಸವಾಡುವುದರಿಂದ ನರಕ ಪ್ರಾಪ್ತಿ

663. ಮತ್ಸರಿಗರ ಚೇಷ್ಟೆ

ಕೋಣನ ಹೇರಿಂಗೆ ಕುನ್ನಿ ಬಸುಕುತ್ತ ಬಡುವಂತೆ
ತಾವು ನಂಬರು, ನಂಬುವವರನೂ ನಂಬಲೀಯರು
ತಾವು ಮಾಡರು, ಮಾಡುವವರನೂ ಮಾಡಲೀಯರು
ಮಾಡುವ ಭಕ್ತರ ಕಂಡು ಸೈರಿಸಲಾರದೆ
ಕೂಗಿಡೆ, ಕೂಗಿಡೆ, ನರಕದಲ್ಲಿಕ್ಕುವ ಲಿಂಗದೇವ.

– ಬ.ವ.ದೀ 662

ಈ ವಚನದಲ್ಲಿ ಒಂದು ಅರ್ಥಪೂರ್ಣವಾದ ಚಿತ್ರಣವಿದೆ. ಕೋಣ ಕಾಯಕ ಜೀವಿ. ಹೊಲದಿಂದ ಹೇರೊಂದನ್ನು ಹೊತ್ತುಕೊಂಡು ತನ್ನ ಪಾಡಿಗೆ ತಾನು ನಡೆದುಕೊಂಡು ಗಂಭೀರವಾಗಿ ಬರುತ್ತಿರುತ್ತದೆ. ಕೆಲಸವಿಲ್ಲದೆ ರಸ್ತೆಯ ಪಕ್ಕದಲ್ಲಿ ಸೋಮಾರಿಯಾಗಿ ಬಿದ್ದುಕೊಂಡಿರುವ ನಾಯಿ ಕೋಣವನ್ನು ನೋಡಿ ತಟ್ಟನೆ ಎದ್ದು ಬೌ ಬೌ ಎಂದು ಬೊಗಳುತ್ತ ಸುತ್ತಮುತ್ತ ಸುಳಿಯುತ್ತದೆ. ಹೆದರಿಸಲು ನೋಡುತ್ತದೆ. ಅದೇ ರೀತಿ ಕೆಲವು ಜನ ಟೀಕಾಕಾರರು, ಮತ್ಸರಿಗರು ಕುನ್ನಿಯ ಕೆಲಸ ನಿರ್ವಹಿಸುತ್ತಾರೆ. ಆದರ್ಶವಾದಿಗಳು ತಮ್ಮ ಪಾಡಿಗೆ ತಾವು ಧರ್ಮ ಬೋಧೆಯನ್ನೋ, ಸಮಾಜ ಸೇವೆಯನ್ನೋ ಮಾಡುತ್ತಾ ಸಾಗುತ್ತಿರುವಾಗ ಕೆಲಸವಿಲ್ಲದ ಕುನ್ನಿಗಳಂತಿರುವ ಕೆಲವು ಟೀಕಾಕಾರರು, ಮತ್ಸರಿಗರು ಅನಾವಶ್ಯಕವಾಗಿ ಟೀಕೆ ಮಾಡುತ್ತ ಕೆಲಸ ಮಾಡುವವರಿಗೆ ನಿರುತ್ಸಾಹ ಉಂಟು ಮಾಡಲು ಯತ್ನಿಸುತ್ತಾರೆ. ಇವರಿಗೆ ಕೆಲವು ಮೌಲ್ಯಗಳಲ್ಲಿ, ಧ್ಯೇಯದಲ್ಲಿ ನಂಬಿಕೆ ಇರದು. ನಂಬಿಕೆ ಇರುವವರನ್ನು ನಿರುತ್ಸಾಹಗೊಳಿಸುವರು. ತಾವು ಮಾಡುವುದಿಲ್ಲ, ಮಾಡುವವರಿಗೂ ಬಿಡುವುದಿಲ್ಲ. ಮಾಡುವ ಭಕ್ತರ ಕಂಡು ಸೈರಿಸಲಾರದೆ ಒಂದೇ ಸಮನೆ ಒರಲುವವರನ್ನು ಲಿಂಗದೇವನು ನರಕದಲ್ಲಿ ಇಕ್ಕದೆ ಇರನು.

664. ಮನ ಹೀನತೆ ಸಲ್ಲದು

ಚೇಳಿಂಗೆ ಬಸುರಾಯಿತ್ತೆ ಕಡೆ, ಬಾಳೆಗೆ ಫಲವಾಯಿತ್ತೆ ಕಡೆ, ನೋಡಾ!
ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೆ ಕಡೆ!
ಅಳಿಮನದಾಸೆಯವರ ಮೂಗ ಹಲುದೋರೆಕೊಯ್ವ,
ಲಿಂಗದೇವಾ. –ಬ.ವ.ದೀ 663

ಚೇಳು ಗರ್ಭಿಣಿಯಾದಾಗ ಅದರ ಅಂತ್ಯ ಸಮೀಪಿಸಿದಂತೆಯೇ ಸರಿ ಎಂದು ನಂಬಲಾಗುತ್ತದೆ. ಏಕೆಂದರೆ ಮರಿ ಹಾಕುವಾಗ ತಾಯಿ ಚೇಳಿನ ಬೆನ್ನನ್ನು ಸೀಳಿಕೊಂಡು ಮರಿಗಳೆಲ್ಲವೂ ಹೊರಬರುತ್ತವೆ. ತಾಯಿ ಚೇಳು ಸತ್ತು ಹೋಗುತ್ತದೆ. ಹೀಗೆ ಗರ್ಭಿಣಿಯಾಗುವ ದೌರ್ಬಲ್ಯದಿಂದ ತನ್ನ ಅಂತ್ಯವನ್ನು ಚೇಳು ತಾನೇ ತಂದುಕೊಳ್ಳುತ್ತದೆ. ಬಾಳೆಯು ಒಂದು ಗೊನೆ ಬಿಡುತ್ತಲೇ ಗೊಡ್ಡಾಗುತ್ತದೆ. ಮುಂದೆ ಫಲವನ್ನು ಬಿಡದು. ಅದೇ ರೀತಿ ಯುದ್ಧಭೂಮಿಯಲ್ಲಿ ಕಾದುವ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಶರಣ ಬಂಧುಗಳಲ್ಲಿ ವಿಶೇಷ ಮನವಿ

ಧರ್ಮಪಿತ, ಮಂತ್ರಪುರುಷ ಬಸವಣ್ಣನವರ 108 ಅಡಿ ಪುತ್ಥಳಿಯು ಶರಣ ಭೂಮಿ, ಧರ್ಮಕ್ಷೇತ್ರ ಬಸವ ಕಲ್ಯಾಣದಲ್ಲಿ ಸಿದ್ಧವಾಗುತ್ತಿದೆಯಷ್ಟೆ. ಈಗ ಆಗಲೇ ಸ್ಪಷ್ಟ ಆಕಾರವನ್ನು ಪಡೆಯುತ್ತಿರುವುದು ಸಂತೋಷವನ್ನು ತರುತ್ತಿದೆ.

ಮೂರ್ತಿಯು 108 ಅಡಿ ಇದ್ದರೂ ಅದರ ಪೀಠವು 24 ಅಡಿಯಷ್ಟು ಇದ್ದು, 2 ಅಂತಸ್ತನ್ನು ಹೊಂದಿದೆ. ಈ ಎರಡು ಅಂತಸ್ತುಗಳಲ್ಲಿ ಗುರು ಬಸವಣ್ಣವರ ಸಮಗ್ರ ಜೀವನ ಚಿತ್ರಿಸಲು ಯೋಜನೆ ರೂಪಿಸಲಾಗಿದೆ. ಧರ್ಮಪಿತ ಬಸವಣ್ಣನವರ ಜೀವನದ 32 ಪ್ರಮುಖ ಘಟನೆಗಳನ್ನು ಗುರುತಿಸಿ, ಪಟ್ಟಿ ಮಾಡಲಾಗಿದೆ. ಇವುಗಳನ್ನು ಆಯಾ ಘಟನೆಯ ಪರಿಸರದ ಹಿನ್ನೆಲೆಯಲ್ಲಿ 3 ಆಯಾಮದ ಮೂರ್ತಿಗಳೊಡನೆ ಚಿತ್ರಿಸಲಾಗುವುದು. ನಂತರ ಬೆಳಕು, ಹಾಗೂ ಶಬ್ದದ ಸಂಯೋಜನೆ ಸಹ ಇರುವುದು. ಒಂದೊಂದು ಘಟನೆಗೆ ಒಂದೂವರೆ ಲಕ್ಷ (1,50,000)ರೂಗಳ ವೆಚ್ಚ ಬರುವುದು. ಕೊಟ್ಟವರ ಹೆಸರಿನ ನಾಮಫಲಕವನ್ನು ಆಯಾ ಕೋಣೆಯ ಮುಂಭಾಗದಲ್ಲಿ ಹಾಕುವುದರ ಜೊತೆಗೆ ಅವರ ಭಾವಚಿತ್ರವನ್ನೂ ಹಾಕಲಾಗುವುದು. ಮೂರ್ತಿಯ ಜೊತೆಗೆ ಈ ಕೆಲಸವೂ ಆಗಬೇಕು. ಉದ್ಘಾಟನೆಗೆ ಎರಡೂ ಸಿದ್ಧವಾಗಿರಬೇಕು.

ಆರ್ಥಿಕ ಅನುಕೂಲತೆ ಇರುವ ಶರಣ ಬಂಧುಗಳು ಈ ಯೋಜನೆಗೆ ಸಹಾಯ ಮಾಡಲು ಸ್ವಯಂ ಸ್ಫೂರ್ತಿಯಿಂದ ಮುಂದೆ ಬರಬೇಕು. ಪ್ರತ್ಯೇಕವಾಗಿ ಇವರ ಹೆಸರು ಪೋಟೋ ಬರುತ್ತದೆ. ಇದು ಅತ್ಯಂತ ಆಕರ್ಷಣೀಯ ದೃಶ್ಯ ಮಾಲಿಕೆಯಾಗುತ್ತದೆ.

ಈಗ ಶರಣ ದಂಪತಿಗಳಾದ ದೇವಿಕಾ ಮತ್ತು ಹೆಚ್.ಎ.ಶರಣಪ್ಪನವರು ಒಂದೂವರೆ ಲಕ್ಷ ರೂ.ಗಳನ್ನು ಈ ಯೋಜನೆಗೆ ಕೊಟ್ಟಿದ್ದಾರೆ. ಇನ್ನೂ ಹೆಚ್ಚಿನವರು ಮುಂದೆ ಬರಬೇಕೆಂದು ಹೃತ್ಪೂರ್ವಕ ಮನವಿ ಮಾಡುತ್ತಿದ್ದೇವೆ.

ಕೋಣೆಯ ದಾನಿಗಳಿಗೆ ಸೂಚನೆ

ಕೂಡಲ ಸಂಗಮದ ಬಸವ ಧರ್ಮ ಪೀಠದ ಆವರಣದಲ್ಲಿ ಈಗಾಗಲೇ ಹಲವು ಕಟ್ಟಡಗಳಾಗಿದ್ದು, ದಾನಿಗಳ ಹೆಸರಿನ ನಾಮಫಲಕ ಕೂರಿಸಲಾಗಿದೆ. ಈಗ ಪುನಃ ಹೊಸ ಕೋಣೆಗಳ ನಿರ್ಮಾಣವಾಗುತ್ತಲಿದೆ. ಕಾಣಿಕೆ ಕೊಟ್ಟು ಇನ್ನೂ ಹೆಸರಿನ ಫಲಕ ಹಾಕದೆ ಇರುವ ದಾನಿಗಳು ಪತ್ರ ಬರೆದು ನಮಗೆ ನೆನಪಿಸಬೇಕು. ಸಿಂಗಲ್ ರೂಂ, ಡಬ್ಬಲ್ ರೂಂ, ಡಾರ್ಮಿಟರಿ – ಮೂರರಲ್ಲಿ ಯಾವುದಕ್ಕೆ ಕೊಟ್ಟಿದ್ದಾರೆ ಎಂಬುದನ್ನು ತಿಳಿಸುವುದರ ಜೊತೆಗೆ ಹಣ ಕೊಟ್ಟ ದಿನಾಂಕ(ಗಳನ್ನು)ಸಹ ತಿಳಿಸಬೇಕು.

ಕೆಲವರು ವಾಗ್ದಾನ ಮಾಡಿ ಕಂತಿನಲ್ಲಿ ಹಣ ಕೊಟ್ಟಿದ್ದಾರೆ. ವಾಗ್ದಾನದ ಸಮಯದಲ್ಲಿ ಸಿಂಗಲ್ ರೂಂ. 81,000, ಡಬಲ್ ರೂಂ 1,00,000, ಡಾರ್ಮಿಟರಿ 1,25000 ಹೀಗೆ ಮಾತುಕೊಟ್ಟಿದ್ದಾರೆ. ಈಗ ಕಬ್ಬಿಣ, ಸಿಮೆಂಟ್ ಎಲ್ಲವೂ ಬೆಲೆ ಏರಿ ಕಟ್ಟಡ ಕಟ್ಟಿಸುವುದು ಪ್ರಯಾಸದ ಕೆಲಸವಾಗಿದೆ. ಆದ್ದರಿಂದ ದಾನಿಗಳು ದೊಡ್ಡ ಮನಸ್ಸು ಮಾಡಬೇಕು. ಅವರಿಗೆ ಭಾರವಾಗದು, ನಮಗೆ ಭಾರವಾಗಿದೆ. ಸಿಂಗಲ್ ರೂಂಗೆ 1,00,000(ಒಂದು ಲಕ್ಷ), ಡಬ್ಬಲ್ ರೂಂಗೆ 1,50,000 (ಒಂದೂವರೆ ಲಕ್ಷ) ಮತ್ತು ಡಾರ್ಮಿಟರಿಗೆ 2,00,000(ಎರಡು ಲಕ್ಷ) ಹೀಗೆ ಉಳಿದ ಹಣವನ್ನು ಕೊಟ್ಟರೆ ಮಹದುಪಕಾರವಾಗುವುದು. ಮೊದಲೇ ಕಳಿಸಿದರೂ ಒಳ್ಳೆಯದು, ಇಲ್ಲವೇ ಶರಣ ಮೇಳಕ್ಕೆ ಬರುವಾಗ ತಂದರೂ ಆಯಿತು. ದಯವಿಟ್ಟು ಸಹಕರಿಸಿರಿ.

– ಮಾತಾಜಿ

ಬಂದರೆ ಕಠಾರಿಯನ್ನು ಹಿರಿದು ಕಾಳಗಕ್ಕೂ ನಿಲ್ಲುವರು. ಲಿಂಗವಂತ, ಜಂಗಮವಂತನಾಗುವುದು ನಿಜಕ್ಕೂ ಕಷ್ಟಕರ. ವೇಷಧಾರಣೆಯಿಂದ ಭಕ್ತರಾದವರು ಡಂಭಕರೇ ವಿನಾ ನಿಜ ಭಕ್ತರಲ್ಲ!

667. ಅಳಿಮನದವರ ಭಕ್ತಿ

ಅಲಗಲಗು ಮೋಹಿಸಿದಲ್ಲದೆ ಕಲಿತನವ ಕಾಣಬಾರದು,
ನುಡಿದ ನುಡಿ ಜಾರಿದಡೆ ಮನಕ್ಕೆ ಮನ ನಾಚಬೇಕು;
ಶಬ್ದಲೊಟ್ಟೆಯತನದಲ್ಲಿ ಎಂತಪ್ಪುದಯ್ಯಾ ಭಕ್ತಿ?
ಪಾಪಿಯ ಕೂಸನೆತ್ತಿದಂತೆ, ಲಿಂಗದೇವರ ಭಕ್ತಿ
ಅಳಿಮನದವರಿಗೆ ಅಳವಡದಯ್ಯಾ. –ಬ.ವ.ದೀ 666

ಇಬ್ಬರು ಎದುರಾಳಿಗಳು ಕತ್ತಿ ಹಿಡಿದು ಹೋರಾಡಿದಾಗ ನಿಜವಾದ ಶೂರತ್ವ ಪ್ರದರ್ಶನಗೊಳ್ಳುವುದು. ಒಬ್ಬ ಶೂರನಿದ್ದು ಅವನಿಗೆ ಎದುರಾಳಿಯೇ ಇಲ್ಲದಿದ್ದರೆ ಅವನ ಶೌರ್ಯ ಅಭಿವ್ಯಕ್ತಿಗೊಳ್ಳುವುದೆಂತು? ಹಾಗೆ ಜೀವನದಲ್ಲಿ ಕಷ್ಟಗಳು ಎದುರಾದಾಗಲೇ ಶರಣನ ಧೈರ್ಯ–ಸ್ಥೈರ್ಯಗಳು ಸ್ಪಷ್ಟಗೊಳ್ಳುವುದು. ಅಂಥ ಸಂಕಷ್ಟದ ಸಂದರ್ಭದಲ್ಲಿ, ನುಡಿದ ನುಡಿ ಜಾರಿದರೆ ಅಂದರೆ ಹಿಂದೆ ತಾನು ಆಡಿದ ಮಾತನ್ನು ನಿರಾಕರಿಸಿದರೆ ಶರಣನ ಅಂತರಾತ್ಮ ನಾಚಬೇಕು. ಕೆಲವರು ಅತಿರೇಕದ ಮಾತುಗಳನ್ನು ಆಡುವರು, ನಂತರ ತಾವು ಹಾಗೆ ಆಡಿಯೇ ಇಲ್ಲ ಎಂದು ನುಣುಚಿಕೊಳ್ಳುವರು. ಬಾಯ ಜೋರು ಮಾಡಿ ಮಾತನಾಡಿ ದಬಾಯಿಸಿ ಇತರರ ಬಾಯಿ ಮುಚ್ಚಿಸುವರು. ಇದು ಶಬ್ದ ಲೊಟ್ಟೆಯತನ, ಪೊಳ್ಳು ಮಾತುಗಳ ಮಹಾಪೂರ. ಇದರಿಂದ ಭಕ್ತಿಯ ಪಾವಿತ್ರ್ಯತೆಗೆ ಚ್ಯುತಿ ಬರುತ್ತದೆ. ಇಂಥವರ ಭಕ್ತಿ 'ಪಾಪಿಯ ಕೂಸನೆತ್ತಿದಂತೆ' ಒಬ್ಬ ಪಾಪಾತ್ಮಳ ಮಗು ಇದೆ ಎಂದುಕೊಳ್ಳುವಾ. ಅವಳ ಬಗ್ಗೆ ತಿರಸ್ಕಾರ, ಆಕ್ರೋಶ ಇರುತ್ತದೆ. ಅವಳು ನಿಸ್ಸಹಾಯಕಳಾಗಿ ಮಲಗಿರುತ್ತಾಳೆ ಎಂದುಕೊಳ್ಳುತ್ತಾ ಆಗ ಆಕೆಯ ಮಗು ಹಸಿವೆಯಿಂದ ಅಳುತ್ತದೆ. ತಾಯಿಯ ಬಗ್ಗೆ ಇರುವ ತಿರಸ್ಕಾರದಿಂದ ಮಗುವನ್ನು ಮುಟ್ಟಲು ಮನಸ್ಸು ಬಾರದು. ಆದರೆ ಅದರ ಮುಗ್ಧತೆ, ರೋದನದಿಂದಾಗಿ ಮಾನವೀಯತೆ ಉಕ್ಕುತ್ತದೆ. ಆಗ ಅಹುದೋ ಅಲ್ಲವೋ ಎಂಬಂತೆ ಮಗುವನ್ನು ಎತ್ತಿಕೊಳ್ಳುವರು. ಹಾಗೆ ಅಳಿಮನದವರ ಭಕ್ತಿಯು ಅಹುದೋ ಅಲ್ಲವೋ ಎಂಬ ಸಂದೇಹದೊಡನೆಯೇ ಸಾಗುತ್ತದೆ. ಹಿಡಿದರೂ ಹಿಡಿಯದಂತಹ ಭಕ್ತಿ ಅದಾಗಿರುತ್ತದೆ. ಅಲ್ಲಿ ತತ್ತ್ವನಿಷ್ಠೆ ಇರುವುದಿಲ್ಲ.

668. ಬೊಳ್ಳೆಗನ ಭಕ್ತಿ

ಹರ ಬೀಜವಾದಡೆ ಹಂದೆ ತಾನಪ್ಪನೆ?
ಒರೆಗಟ್ಟಿ ಇರಿಯದವರ ಲೋಕ ಮೆಚ್ಚುವುದೆ?
ಉಟ್ಟ ಚಲ್ಲಣ ಕೈಯ ಪಟ್ಟೆಯ ಎಡಿದು,
ಗರುಡಿಯ ಕಟ್ಟಿ ಶ್ರವವ ಮಾಡುವಂತೆ
ತನ್ನ ತಪ್ಪಿಸಿಕೊಂಡಡೆ, ಶಿವ ಮೆಚ್ಚುವನೆ?
ಅರಿಯದವರಿಗೆ ಒಳ್ಳೆ ಹೆಡೆಯತ್ತಿಯಾಡುವಂತೆ

ಮಾಡಿಕೊಳ್ಳುತ್ತಿದ್ದರು. ತಾವು ಕಟ್ಟಿದ್ದ ಅಥವಾ ಮುಡಿಯಲ್ಲಿಟ್ಟುಕೊಂಡ ಲಿಂಗವು ಜಾರಿಬಿದ್ದರೆ ಪ್ರಾಣವನ್ನೇ ತೆಗೆದುಕೊಳ್ಳುತ್ತಿದ್ದರು. ಭಕ್ತರು ಸಾಮಾನ್ಯ ವರ್ಗದವರು. ವಚನ ಸಾಹಿತ್ಯದಲ್ಲಿ ಈ ಎಲ್ಲ ಆಚರಣೆಗಳ ಖಂಡನೆ ಕಾಣಬರುತ್ತದೆ. ವೀರರೆಂದು ಹೇಳಿಕೊಳ್ಳುವಿರಿ.ನಿಮ್ಮ ಶೌರ್ಯವನ್ನು ಇನ್ನೊಬ್ಬರನ್ನು ಕೊಲ್ಲಲು ಬಳಸದೆ ಶತ್ರುಗಳನ್ನು ಗೆಲ್ಲಲು ಬಳಸಿರಿ. ವ್ರತಿಗಳೆಂದು ಹೇಳಿಕೊಳ್ಳುವಿರಿ. ಸ್ತ್ರೀಯರ ಕೈಯ ಅಡಿಗೆ ಉಣ್ಣುವುದಿಲ್ಲ ಎಂದು ಹೇಳುವಿರಿ. ನಿಮ್ಮ ವೈರಾಗ್ಯದಿಂದ ಅಂಗನೆಯರು ಮೆಚ್ಚಿ ಬೆರಗಾಗುವಂತೆ ಮಾಡಿರಿ. ಅಡಿಗೆ ಮಾಡಿದವರು, ಉಣಲಿಕ್ಕಿದವರು ಸ್ತ್ರೀಯರು ಎಂಬ ಭಾವವಾದರೂ ಏಕೆ ಕಾಡಬೇಕು? ಅವರಲ್ಲಿ ದೈವೀಚೈತನ್ಯ ಕಾಣಬಾರದೆ? ನಿಜ ಭಕ್ತರಾದರೆ ನಿಮ್ಮ ಸೇವೆಯಿಂದ ಜಂಗಮನು ಮೆಚ್ಚಬೇಕು. ತನುಮನ ಧನಗಳನ್ನು ಸರ್ವಾರ್ಪಣ ಮಾಡಬೇಕು ಈ ರೀತಿ ನಡೆದರೆ ಲಿಂಗದೇವನು ಮೆಚ್ಚುವನೇ ವಿನಾ ಕ್ರೂರ ಆಚರಣೆ, ಕಂದಾಚಾರಕ್ಕಲ್ಲ.

672. ನಾಲಿಗೆ ನಿಯಂತ್ರಣ

ಕಲಿತನ ತನಗುಳ್ಳಡೆ ಸೂಜಿಬಾಳು ಮೊದಲಾಗಿ ಕಾದಲೇಬೇಕು.
ಶರಣಪಥ ತನಗುಳ್ಳಡೆ ಶಿವಭಕ್ತರ ಮನೆಯ ಶಿವರಸವ
ಪಂಚಾಮೃತವ ಮಾಡಿಕೊಂಡು ಉಣ್ಣಬೇಕು
ಭ್ರಾಂತುವಿಡಿದು ಲಿಂಗಕ್ಕೋಗರವನರಸುವ
ಪಾತಕರ ಮೆಚ್ಚ ಲಿಂಗದೇವ. –ಬ.ವ.ದೀ 671

ಒಬ್ಬ ವ್ಯಕ್ತಿ ಶೂರನೇ ಆಗಿದ್ದರೆ ಅವನು ಕಠಿಣ ಪ್ರಸಂಗ ಎದುರಾದಾಗ ಸೂಜಿಯನ್ನೇ ಆಯುಧವಾಗಿ ಮಾಡಿಕೊಂಡು, ಸಿಕ್ಕಿದ ಬಾಳುವನ್ನೇ ಸಾಧನವಾಗಿ ಮಾಡಿಕೊಂಡು ಎದುರಿಸುವನು. ಯಾವ ಆಯುಧವೂ ಸಿಗದಿದ್ದರೆ ತನ್ನ ತೋಳ್ಬಲದಿಂದಲೇ ದುಷ್ಟರನ್ನು ಎದುರಿಸುವನು. ಅದೇ ರೀತಿ ಭಕ್ತರ ಮನೆಗಳನ್ನು ಸಂದರ್ಶಿಸುವ ಜಂಗಮರು ನಿಜವಾದ ಶರಣ ಮಾರ್ಗಿಗಳಾದರೆ ಬಡಭಕ್ತರ ಮನೆಯಲ್ಲಿ ಲಭ್ಯವಾಗುವ ಆಹಾರವನ್ನೇ ಪಂಚಾಮೃತ ಎಂದು ಭಾವಿಸಿ ಊಟಮಾಡಬೇಕು. ಅದರ ಬದಲು ಬಡಭಕ್ತರ ಮನೆಯ ಬಿನ್ನಹ ಕಡೆಗಣಿಸಿ ಶ್ರೀಮಂತ ಭಕ್ತರ ಮನೆಯ ಭಕ್ಷ್ಯ ಭೋಜ್ಯಗಳನ್ನು ಹುಡುಕಿಕೊಂಡು ಹೋಗುವ ಪಾತಕರನ್ನು ಲಿಂಗದೇವನು ಮೆಚ್ಚ.

673. ಶರಣ ಸಹಜ ಸಜ್ಜನ

ಕಟ್ಟಿ ಬಿಡುವನೆ ಶರಣನು? ಬಿಟ್ಟು ಹಿಡಿವನೆ ಶರಣನು?
ನಡೆದು ತಪ್ಪುವನೆ ಶರಣನು? ನುಡಿದು ಹುಸಿವನೆ ಶರಣನು?
ಸಹಜ ಸಜ್ಜನಿಕೆ ತಪ್ಪಿದಡೆ,
ಲಿಂಗದೇವಯ್ಯ ಮೂಗ ಹಲುದೋರ ಕೊಯ್ವ –ಬ.ವ.ದೀ 672

ಪೂರ್ವಾಶ್ರಯವನ್ನು ತೊರೆದು ಇಷ್ಟಲಿಂಗವನ್ನು ಧರಿಸಿ ಭಕ್ತನಾದ ಬಳಿಕ ನಿಷ್ಠಾವಂತನು ಎಂತಹ ಪ್ರಸಂಗದಲ್ಲಿಯೂ ಕಟ್ಟಿದ್ದ ಇಷ್ಟಲಿಂಗವನ್ನು ಬಿಡುವುದಿಲ್ಲ. ಮತ್ತು ಬಿಟ್ಟ ಪೂರ್ವಾಶ್ರಮವನ್ನು ಮತ್ತೆ ಹಿಡಿಯುವುದಿಲ್ಲ. ಒಂದು ವೇಳೆ ಮೊದಲಿಗೆ ದುಶ್ಚಟಗಳಿಂದ ಕೂಡಿದ್ದು ನಂತರ

ಭಕ್ತರು ದೀಕ್ಷಾವಂತರಾಗಿ ಶರಣ ಸಮಾಜವನ್ನು ಸೇರಿದ ಬಳಿಕ ಪುನಃ ಪೂರ್ವಾಶ್ರಮದ ಭವಿಗಳೊಡನೆ ಬೆರೆಸಬಾರದು. ಪಾಪಗಳಲ್ಲಿ ಮಹಾಪಾಪ ಬ್ರಹ್ಮಹತ್ಯೆ, ಭ್ರೂಣಹತ್ಯೆ. ಇವುಗಳಿಂದ ವೈತರಣಿ ಎಂಬ ದುಃಖದ ನದಿಯಲ್ಲಿ ಮುಳುಗಬೇಕಾಗುವುದು, ದುರ್ಗತಿಯನ್ನು ಎದುರಿಸಬೇಕಾಗುವುದು. ಪಂಚಮಹಾಪಾತಕಗಳೆಂದರೆ ಗುರು, ಲಿಂಗ, ಜಂಗಮ, ಪ್ರಸಾದ, ಆಚಾರ ದ್ರೋಹ. ಇವಕ್ಕೂ ಅಧಿಕ ಭವಿಯ ಸಂಗ. ಭಕ್ತನಾದವನು ಭವಿಯ ಸಂಗಡ ಉಣ್ಣಬಾರದು.

ಈ ವಚನ ಇಂದಿನ ಕಾಲದಲ್ಲಿ ಮತಾಂಧತೆಯ ವಚನವೆನಿಸುತ್ತದೆ. ಗುರು ಬಸವಣ್ಣನವರು ಹೊಸ ಧರ್ಮ-ಲಿಂಗಾಯತವನ್ನು ಕೊಟ್ಟು ಅದರ ಬಾಗಿಲನ್ನು ಎಲ್ಲರಿಗೂ ತೆರೆದರು. ಆಗ ಬ್ರಾಹ್ಮಣನಿಂದ ಭಂಗಿಯವರೆಗೆ, ಹಾರುವನಿಂದ ಹೊಲೆಯನವರೆಗೆ ಎಲ್ಲರೂ ಪ್ರವೇಶಿಸಿದರು. ಬಸವ ಧರ್ಮ ಶುದ್ಧ ಸಸ್ಯಾಹಾರ ಪದ್ಧತಿಯನ್ನು ಬೋಧಿಸಿ ಮಾಂಸಾಹಾರ, ಮದ್ಯಪಾನವನ್ನು ನಿಷೇಧಿಸಿದ ಧರ್ಮ. ವಿವಿಧ ವರ್ಗಗಳಿಂದ ಬಂದ ಭಕ್ತರಿಗೆ ಕೆಲವು ಕಟ್ಟುನಿಟ್ಟು ಹಾಕಲೇಬೇಕಿತ್ತು. ಉದಾಹರಣೆಗೆ ಬ್ರಾಹ್ಮಣ ಮೂಲದಿಂದ ಬಂದವರಿಗೆ ಹೋಮ-ಹವನಾದಿ ಮಾಡಬಾರದು. ಅವನ್ನು ಮಾಡುವವರೊಡನೆ ಬೆರೆಸಬಾರದು ಎಂದು ವಿಧಿಸಿದರೆ, ಮಾಂಸಾಹಾರಿ ವರ್ಗಗಳಿಂದ ಬಂದವರಿಗೆ ಅದನ್ನು ಸೇವನೆ ಮಾಡುವವರೊಡನೆ ಬೆರೆಸಬಾರದು ಎಂದು ಕಟ್ಟುನಿಟ್ಟು ಹಾಕಲಾಗುತ್ತಿತ್ತು. ಆದರಿಂದು ಕಾಲ ಬದಲಾಗಿದೆ. ಜಾತಿ ಪದ್ಧತಿ ನಶಿಸುತ್ತಿದೆ. ಪರವೂರುಗಳ ಪ್ರವಾಸ ಕೈಗೊಂಡಾಗ ಇನ್ನಿತರರೊಡನೆ ಹೋಟೆಲಿನಲ್ಲಿ ಉಣ್ಣಬೇಕಾಗುತ್ತದೆ. ಇದಕ್ಕಾಗಿ ದೀಕ್ಷೆ ತೆಗೆದುಕೊಳ್ಳುವುದನ್ನು ಬಿಡಬಾರದು. ದೀಕ್ಷೆ ಪಡೆದು ಕನಿಷ್ಠ ಒಮ್ಮೆಯಾದರೂ ಬೆಳಗಿನ ಹೊತ್ತು ಪೂಜೆ ಮಾಡಬೇಕು. ಹೋಟೆಲಿನಲ್ಲಿ ಉಂಡರೂ ಸಸ್ಯಾಹಾರ ಉಣ್ಣಬೇಕು.

671. ವೀರಶೈವದ ಖಂಡನೆ

ವೀರ, ವ್ರತಿ, ಭಕ್ತನೆಂದು ಹೊಗಳಿಕೊಂಬಿರಿ ಕೇಳಿರಯ್ಯಾ;
ವೀರನಾದಡೆ ವೈರಿಗಳು ಮೆಚ್ಚಬೇಕು.
ವ್ರತಿಯಾದಡೆ ಅಂಗನೆಯರು ಮೆಚ್ಚಬೇಕು.
ಭಕ್ತನಾದಡೆ ಜಂಗಮ ಮೆಚ್ಚಬೇಕು;
ಈ ನುಡಿಯೊಳಗೆ ತನ್ನ ಬಗೆಯಿರೆ
ಬೇಡಿದ ಪದವಿಯನೀವ ಲಿಂಗದೇವ.

–ಬ.ವ.ದೀ 670

ಲಿಂಗಾಯತ ಧರ್ಮವನ್ನು ಸ್ವೀಕರಿಸಿದವರಲ್ಲಿ ಎಲ್ಲ ಕುಲ, ಜಾತಿ, ಮತ,ಪಂಥದವರು ಇರುವಂತೆ ವೀರಶೈವರು ಆಂಧ್ರ ಮತ್ತು ತಮಿಳುನಾಡು ಮೂಲದಿಂದ ಬಂದು ಸೇರಿದರು ಆಂಧ್ರ ವೀರಶೈವದಲ್ಲಿ ಕೆಲವು ಕಠೋರ ಆಚರಣೆಗಳಿದ್ದವು. ಹಾಗೆ ವ್ರತಧಾರಣೆ ಮಾಡಿದವರಲ್ಲಿ ವೀರ, ವ್ರತಿ, ಭಕ್ತ ಎಂಬ ಭೇದಗಳಿದ್ದು ವೀರಶೈವರು ಬಹು ಹೆಮ್ಮೆಯಿಂದ ಅವನ್ನು ಹೇಳಿಕೊಳ್ಳುತ್ತಿದ್ದರು. ವೀರರು ಶಿವನಿಗಾಗಿ ತಮ್ಮ ಪ್ರಾಣವನ್ನು ಮೀಸಲಿಡುತ್ತಿದ್ದರು. ಶಿವದ್ರೋಹವನ್ನು ಶಿವ ನಿಂದೆಯನ್ನು ಯಾರಾದರೂ ಮಾಡಿದರೆ ಅವರ ಶಿರಚ್ಛೇದ ಮಾಡುತ್ತಿದ್ದರು. ವ್ರತಿಗಳು ಕಠೋರ ನಿಯಮ ಪಾಲಿಸುತ್ತಿದ್ದರು. ಸ್ತ್ರೀಯರ ಕೈಯಲ್ಲಿನ ಊಟ ಮಾಡುತ್ತಿರಲಿಲ್ಲ. ಸ್ವಯಂಪಾಕ

ಬೊಳ್ಳೆಗನ ಭಕ್ತಿ ಲಿಂಗದೇವಾ ! –ಬ.ವ.ದೀ 667

ಶಿವನ ಸಂತತಿಯೇ ಆದವನು ಹೇಡಿಯಾಗಲು ಸಾಧ್ಯವೇ? ನಿಜ ಶಿವಭಕ್ತ ಅಪ್ರತಿಮ ವೀರ. ಯುದ್ಧಭೂಮಿಯಲ್ಲಿ ಎದುರಾಳಿಯನ್ನು ಇರಿಯದವನನ್ನು ಲೋಕವು ಮೆಚ್ಚುವುದೆ? ಸದಾಕಾಲ ಚಲ್ಲಣ ಉಟ್ಟು ಕೈಯಲ್ಲಿ ಆಯುಧ ಇಟ್ಟುಕೊಂಡು ಯುದ್ಧಾಭ್ಯಾಸ ಮಾಡುವಂತೆ ಅಭ್ಯಾಸ ಮಾಡುತ್ತ ಯುದ್ಧವು ಒದಗಿದಾಗ ಹೋಗುವುದರಿಂದ ತಪ್ಪಿಸಿಕೊಂಡರೆ ದೇವರು ಮೆಚ್ಚುವನೆ? ನೀರು ಹಾವು, ಮಣ್ಣು ಮುಕ್ಕ ಮುಂತಾದವು ನಾಗರ ಹಾವಿನಂತೆ ವಿಷಪೂರಿತವಲ್ಲ ಗೊತ್ತಿಲ್ಲದ ಜನ ಅವನ್ನು ನೋಡಿ ಭಯಪಡುವರು. ಅದೇ ರೀತಿ ಕೆಲವು ಡಾಂಭಿಕರು ಬಹಳ ಭಕ್ತರು ಎಂಬಂತೆ ತೋರಿಸಿಕೊಳ್ಳುವರು; ಒಳಗೇನೂ ಸತ್ವವಿರದು ಇವರನ್ನು ಬೊಳ್ಳೆಗರು ಬೂಟಾಟಿಕೆಯವರು ಎಂದು ಗುರು ಬಸವಣ್ಣನವರು ಜರಿದಿದ್ದಾರೆ.

669. ಭಾಷೆ ತಪ್ಪದಿರಬೇಕು.

ಮೊನೆ ತಪ್ಪಿದ ಬಳಿಕ ಅಲಗೇನ ಮಾಡುವುದು?
ವಿಷ ತಪ್ಪಿದ ಬಳಿಕ ಹಾವೇನ ಮಾಡುವುದು?
ಭಾಷೆ ತಪ್ಪಿದ ಬಳಿಕ ದೇವಾ, ಬಲ್ಲಿದ ಭಕ್ತನೇನ ಮಾಡುವನು?
ಭಾಷೆ ತಪ್ಪಿದ ಬಳಿಕ ಪ್ರಾಣದಾಸೆಯ ಹಾರಿದಡೆ
ಮೀಸಲನು ಸೊಣಗ ಮುಟ್ಟಿದಂತೆ, ಲಿಂಗದೇವಾ ! –ಬ.ವ.ದೀ 668

ಕತ್ತಿಗೆ ಬಹುಮುಖ್ಯವಾದುದು ಚೂಪಾದ ಅದರ ತುದಿ; ಅದರ ಬಲದಿಂದಲೇ ಸೈನಿಕನು ಎದುರಾಳಿಯನ್ನು ಎದುರಿಸುವುದು. ಅಂಥ ಮೊನೆಯೇ ಇಲ್ಲದೆ ಕತ್ತಿಯು ಮೊಂಡಾದ ಮೇಲೆ ಅದರ ಪ್ರಯೋಜನವೇನು? ಹಾವು ತನ್ನ ವಿಷದ ಹಲ್ಲುಗಳಿಂದ ಕೊಲ್ಲುವುದು; ಅದರ ಹಲ್ಲನ್ನೇ ಕಿತ್ತಬಳಿಕ ಅದು ಏನು ಮಾಡಬಲ್ಲುದು? ಹಾಗೆ ಭಾಷೆ ತಪ್ಪಿದ ಬಳಿಕ ನಿಜ ಶರಣನು ಹತಾಶನಾಗುವನು. ಶರಣರು ತಾವು ನುಡಿದ ನುಡಿಯನ್ನು ಪೂರೈಸಲು ಬದ್ಧರಾಗಿರುತ್ತಾರೆ. ಎಂಥ ಪ್ರಸಂಗದಲ್ಲೂ ತಮ್ಮ ಮಾತನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಭಾಷೆ ತಪ್ಪಿದರೆ ಪ್ರಾಣವನ್ನು ತೊರೆಯಲೂ ಸಿದ್ಧರಾಗುತ್ತಾರೆ. ಏಕೆಂದರೆ ಭಾಷೆ ತಪ್ಪುವುದೆಂದರೆ ಅವರಿಗೆ ಗುರು ಜಂಗಮರಿಗಾಗಿ ಮಾಡಿ ಮೀಸಲಿಟ್ಟ ಅಡಿಗೆಯನ್ನು ನಾಯಿ ಮುಟ್ಟಿದಂತೆ ಎಂಬಷ್ಟು ವೇದನೆಯಾಗುವುದು.

670. ಭವಿಯೊಡನಾಟ ಸಹ್ಯವಲ್ಲ

ಶರಣಸಂಬಂಧವನರಿದ ಬಳಿಕ
ಮರಳಿ ಭವಿಯ ಬೆರಸಲಾಗದು.
ಬ್ರಹ್ಮ ಹತ್ಯ, ಭ್ರೂಣಹತ್ಯ, ವೈತರಣಿ, ದುರ್ಗತಿ
ಪಂಚಮಹಾಪಾತಕದಿಂದಧಿಕ ನೋಡಾ!
ಅಳುಪಿ ಭವಿಯೊಡನುಂಡಡೆ ಭಕ್ತನಲ್ಲ, ಲಿಂಗದೇವಾ.

–ಬ.ವ.ದೀ 669.

ಪರಿವರ್ತನೆಗೊಂಡರೆ ಎಂತಹ ಸ್ಥಿತಿಯಲ್ಲಿಯೂ ಮತ್ತೆ ಹಳೆಯ ಅಭ್ಯಾಸಗಳನ್ನು ಶರಣನು ರೂಢಿಸಿಕೊಳ್ಳುವುದಿಲ್ಲ. ಶರಣ ಪಥದಲ್ಲಿ ಸಾಗುತ್ತ ಮತ್ತೆ ತಪ್ಪು ಹೆಜ್ಜೆ ತುಳಿಯುವುದಿಲ್ಲ. ನುಡಿದು ಹುಸಿಯುವುದಿಲ್ಲ. ಆವೇಶದಲ್ಲಿ ಮಾತನಾಡಿ ನಂತರ ತಾನು ಆ ರೀತಿ ಮಾತನ್ನಾಡಿಲ್ಲ. ಎಂದು ಸುಳ್ಳು ಹೇಳುವುದಿಲ್ಲ. ಶರಣನದು ಸಹಜ ಸಜ್ಜನಿಕೆ; ಅದು ತಪ್ಪಿದರೆ ಲಿಂಗದೇವನು ಶಿಕ್ಷಿಸುವನು.

674. ವ್ರತಗೇಡಿಯ ಒಡನಾಟ ಸಲ್ಲದು

ಹುಟ್ಟುವಲ್ಲಿ ಭವಿ, ಮರಳಿ ಭಕ್ತನ ಮಾಡಿ, ಪೂರ್ವಾಶ್ರಯವ ಕಳೆದು
ಹೊಂದುವಲ್ಲಿ ಭವಿಯಾಗಿ ಹೋಹರ ಮುಟ್ಟಲಾಗದು.
ಅವನ ಮುಟ್ಟಿದವ ಮುನ್ನವೆ ವ್ರತಗೇಡಿ
ಅವನ ಶ್ರಾದ್ಧಾಕಾಲವೆ ಶ್ವಾನಮಾಂಸ
ಕ್ರಿಯಾಕಾರವೆ ಕ್ರಿಮಿಗಳು, ತದ್ದಿನವೆ ಮದ್ಯಮಾಂಸ !
ಇದು ಕಾರಣ, ಲಿಂಗದೇವಾ,
ಅವನ ಮನೆಯ ವಿಚಾರಿಸದೆ ಹೊಕ್ಕವಂಗೆ ನಾಯಕನರಕ. –ಬ.ವ.ದೀ 673

ಒಬ್ಬ ವ್ಯಕ್ತಿ ಹುಟ್ಟುತ್ತ ಭವಿ. ಅವನು ಗುರುಗಳಿಂದ ದೀಕ್ಷೆ ಪಡೆದು ಲಿಂಗಾಯತನಾಗುವನು. ಆದರೆ ತಾನು ಸ್ವೀಕರಿಸಿದ ಧರ್ಮಮಾರ್ಗವನ್ನು ಬಿಟ್ಟು ಅವನು ತನ್ನ ಪೂರ್ವಾಶ್ರಮದೊಡನೆ ಒಡನಾಟ ಇಟ್ಟುಕೊಂಡ ಎಂದುಕೊಳ್ಳುವ; ಆಗ ಜಂಗಮರಾದಿಯಾಗಿ ಉಳಿದ ಶರಣರು ಅವರೊಡನೆ ವ್ಯವಹಾರ ಇಟ್ಟುಕೊಳ್ಳಬಾರದು. ಅವರ ಮನೆಯಲ್ಲಿ ಶ್ರಾದ್ಧಾದಿ ಕಾರ್ಯಗಳು ನಡೆದರೆ ಅಲ್ಲಿ ಹೋಗಿ ಪ್ರಸಾದ ಸ್ವೀಕಾರ ಮಾಡಬಾರದು. ಆ ವ್ಯಕ್ತಿ ಶರಣ ಮಾರ್ಗದಲ್ಲಿ ನಡೆದಿದ್ದಾನೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳದೆ ಜಂಗಮರು ಅವರ ಮನೆಯನ್ನು ಹೊಗಬಾರದು. ದೀಕ್ಷಾವಂತರು ಕಟ್ಟುನಿಟ್ಟಾಗಿ ನಡೆಯಲೆಂದು ಇಂಥ ಎಲ್ಲ ನಿಷೇಧವನ್ನು ಗುರು ಬಸವಣ್ಣನವರ ಆದಿಯಾಗಿ ಸಮಕಾಲೀನ ಶರಣರು ವಿಧಿಸಿದ್ದಾರೆ. ಇದು ಈ ಕಾಲದಲ್ಲಿ ಸ್ವಲ್ಪ ವಿಲಕ್ಷಣವೆನಿಸುತ್ತದೆ. ಲಿಂಗಾಯತೇತರರ ಮನೆಯಲ್ಲಿ ಜಂಗಮರು ಹೋಗಿ ಅನೇಕ ಧಾರ್ಮಿಕ ಕ್ರಿಯೆಗಳನ್ನು ವಿವಾಹ, ಶವ ಸಂಸ್ಕಾರ ಮುಂತಾಗಿ ನಡೆಸುತ್ತಾರೆ. ಮೇಲಿನ ನಿಷೇಧದಂತೆ ಹೋಗುವುದು ಬಿಟ್ಟರೆ ಆಗ ಆ ಜನ ಬ್ರಾಹ್ಮಣ ಪುರೋಹಿತರ ಮೊರೆ ಹೋಗುತ್ತಾರೆ. ಅಲಿಂಗಿಗಳ ಮನೆಯಲ್ಲಿ ಜಂಗಮರು ಪ್ರಸಾದ ಸ್ವೀಕಾರ ಮಾಡದಿದ್ದರಷ್ಟೆ ಧಾರ್ಮಿಕ ಕ್ರಿಯೆಗಳನ್ನು ನಡೆಸಲು ಅಡ್ಡಿಯಿಲ್ಲ ಎಂದು ತಿದ್ದುಪಡಿ ಮಾಡಬೇಕಾಗುತ್ತದೆ. ಇತ್ತೀಚೆಗೆ ನಡೆದ ಪ್ರಸಂಗ, ಒಬ್ಬರು ಅಪ್ಪಟ ಶರಣಮಾರ್ಗಿಗಳಾದ ಜಂಗಮರು ಬಂದು ಹೇಳಿದರು. "ನಮ್ಮೂರಲ್ಲಿ ಗೌಡರ (ಹಳೆ ಮೈಸೂರು ಒಕ್ಕಲಿಗರು) ಮನೆಗಳಿಗೆ ಹೋಗಿ ಧಾರ್ಮಿಕ ಕಾರ್ಯಕ್ರಮ ಮಾಡುವವರು ನಾವೆ. ಮೊದಲು ಕಳಸ ಹೂಡುತ್ತಿದ್ದೆವು. ಈಗ ಗುರು ಬಸವಣ್ಣನವರ ಭಾವಚಿತ್ರ ಇಟ್ಟು ಪೂಜೆ ಮಾಡಿ ಅಡಿಗೆ ಎಡೆ ಮಾಡಿ ಕೊಡುತ್ತೇವೆ. ನಂತರ ಅವರು ಊಟ ಶುರು ಮಾಡುತ್ತಾರೆ." ಇದರಿಂದ ಲಿಂಗಾಯತೇತರರು ಹೋಮ-ಹವನ ಮಾಡುವುದು ತಪ್ಪಿ ಶರಣ ಪಥದ ಸಂಸ್ಕಾರ ಕೊಂಚವಾದರೂ ಆಗುತ್ತದೆಯಷ್ಟೆ.

(ಮುಂದುವರಿಯುತ್ತದೆ.......)

ಸೈನಿಕನು ಯುದ್ಧ ಭೂಮಿಯಿಂದ ಹಿಮ್ಮೆಟ್ಟಿದರೆ ಅದೇ ನೈತಿಕ ಅಂತ್ಯವಾಗುತ್ತದೆ. ಅವನಿಗೆ ಜೀವಗಳ್ಳನೆಂಬ ಬಿರುದು ಪ್ರಾಪ್ತವಾಗುತ್ತದೆ. ಅದೇ ರೀತಿ ಗುರುವಿನ ಮುಂದೆ ಪ್ರತಿಜ್ಞೆ ಮಾಡಿದ ಭಕ್ತನು ಹಾಕಿಕೊಂಡ ನೇಮವನ್ನು ಪಾಲಿಸದೆ ಮನ ಹೀನನಾದಡೆ ಅದೇ ಅವನ ಜೀವನದ ನೈತಿಕ ಅಂತ್ಯವಾಗುತ್ತದೆ. ನಂತರ ಅವನು ಬದುಕಿದ್ದರೂ ಸತ್ತಂತೆಯೇ ಸರಿ!

665. ತತ್ತ್ವಭ್ರಷ್ಟರಿಗೆ ಶಿಕ್ಷೆ

ಹುಲಿಯ ಹಾಲು ಹುಲಿಮರಿಗಲ್ಲದೆ ಹೊಲದ ಹುಲ್ಲೆಗೆ ಉಣಬಾರದು;
ಕಲಿಯ ಕಾಲತೊಡರು ಛಲದಾಳಿಗಲ್ಲದೆ ಇಕ್ಕಬಾರದು.
ಅಳಿಮನದಾಸೆಯವರ ಮೂಗ ಹಲುದೋರೆಕೊಯ್ವ,
ಲಿಂಗದೇವಾ. –ಬ.ವ.ದೀ 664

ಸಾಂಪ್ರದಾಯಿಕವಾಗಿ ಒಂದು ನಂಬಿಕೆ ಇದೆ. ಹುಲಿಯ ಹಾಲು ಅತೀವ ಉಷ್ಣ. ಅದನ್ನು ಸಾಮಾನ್ಯ ಪಾತ್ರೆಯಲ್ಲಿ ಹಿಡಿಯಲು ಆಗುವುದಿಲ್ಲ ಬಂಗಾರದ ಪಾತ್ರೆಯಲ್ಲೇ ಹಿಡಿಯಬೇಕು. ಒಂದಂತೂ ಸತ್ಯ. ಮಾಂಸಾಹಾರಿ ಪ್ರಾಣಿಯಾದ ಹುಲಿಯ ಹಾಲನ್ನು ಹುಲಿಯ ಮರಿ ಕುಡಿದು ಜೀರ್ಣಿಸಿಕೊಳ್ಳಬಲ್ಲುದಲ್ಲದೆ ಕೇವಲ ಸಸ್ಯಗಳನ್ನು ತಿಂದು ಬದುಕುವ ಹೊಲದ ಹುಲ್ಲೆ (ಜಿಂಕೆ) ಜೀರ್ಣಿಸಿಕೊಳ್ಳಲಾರದು. ಅದೇ ರೀತಿ ಶೂರನಾದ ಸೈನಿಕನು ಹಾಕುವ ವರಸೆಗಳನ್ನು ಅಷ್ಟೇ ಶೂರನಾದ ಛಲದಾಳು ಎದುರಿಸಬಲ್ಲನಲ್ಲದೆ ಹೇಡಿಯಲ್ಲ. ಹಾಗೆ ಅಳಿಮನದ ದುರ್ಬಲರು ಸುಲಭವಾಗಿ ಏಕದೇವೋಪಾಸನೆ ಮುಂತಾದ ತತ್ತ್ವಗಳನ್ನು ಬಿಟ್ಟು ಬಿಡುವರು. ಇಂಥವರನ್ನು ಲಿಂಗದೇವನು ಶಿಕ್ಷಿಸುವನು.

666. ವೇಷ ಡಂಭಕರ ಭಕ್ತಿ

ಅರ್ಥಪ್ರಾಣಾಭಿಮಾನ ನಿಮ್ಮದೆಂಬಿರಿ
ಒತ್ತಿ ನೋಡಿದಡೆ ಮುಟ್ಟಲೀಯಿರಿ.
ಮುಟ್ಟ ಬಂದಲ್ಲಿ ಕಠಾರಿಯ ಕಾಳೆಗವ ನೀವಾಡಿಸುವಿರಲ್ಲದೆ
ಲಿಂಗಜಂಗಮವಂತನಾಗಬಾರದು!
ಲಿಂಗದೇವಾ, ವೇಷಡಂಭಕರಿಗೆ ಭಕ್ತಿ ಎಂತಪ್ಪುದಯ್ಯಾ?
– ಬ.ವ.ದೀ 665

ಕೆಲವು (ಶ್ರೀಮಂತ) ಭಕ್ತರು ಇರುವುದುಂಟು. ಅವರು ಗುರು ಜಂಗಮರೊಡನೆ ಅತ್ಯಂತ ವಿನೀತ ಭಾವದಿಂದ ವರ್ತಿಸುವುದುಂಟು. "ಬುದ್ಧಿ, ನನ್ನದೆನ್ನುವುದು ಏನೂ ಇಲ್ಲ. ನನ್ನ ಸಂಪತ್ತಾಗಲಿ, ಪ್ರಾಣವಾಗಲಿ, ಅಭಿಮಾನವಾಗಲಿ ನಿಮ್ಮದೇ! ಇವೆಲ್ಲವು ನಿಮ್ಮ ಸೇವೆಗೆ ಸದಾ ಸಿದ್ಧ" ಎನ್ನುವರು. ಈ ಮಾತನ್ನು ನಂಬಿ ಗುರುಗಳು ಅವನ ಸಂಪತ್ತಿನ ಬೃಹತ್ತತೆ ನೋಡಿ ಹೆಚ್ಚಿನ ಕಾಣಿಕೆ ಕೇಳಿದರೆ, ಅಥವಾ ಅಭಿಮಾನದಿಂದ ಯಾವುದಾದರೂ ಹೋರಾಟದಲ್ಲಿ ಭಾಗವಹಿಸಲು ಕರೆದರೆ ಆಗ ಸಿಟ್ಟಿಗೆದ್ದು ಮಾತನಾಡುವರು. ಒತ್ತಿ ಪರೀಕ್ಷಿಸಿದರೆ ಸಹಿಸಿಕೊಳ್ಳುವುದಿಲ್ಲ. ಪ್ರಸಂಗ

ನೆನಪಿನ ಬುತ್ತಿ ಬಿಚ್ಚಿದಾಗ -4

- ಮಾತಾಜಿ

ಪೂಜ್ಯ ಸ್ವಾಮೀಜಿ ಬರೆದ ಅಕ್ಕನ ಪ್ರವಚನ ಓದುವ ಆಸೆ ಅದಮ್ಯವಾಗಿತ್ತು, ಆದರೆ ಕೊಳ್ಳಲು ಹಣವಿರಲಿಲ್ಲ. ಈಗಾಗಲೇ ಹೇಳಿರುವಂತೆ ನಿಜವಾದ ಬಡತನ ನಮಗಿರಲಿಲ್ಲ, ತಾತನ ಜಿಪುಣತನ ಕಟ್ಟಿಹಾಕಿತ್ತು. ಪಕ್ಕದ ಮನೆಯವರಿಂದ ಕೈಗಡ ಪಡೆದು ದೇವರು, ಲಿಂಗತತ್ವದರ್ಪಣ, ಲಿಂಗಪೂಜಾ ವಿಧಾನ ಮುಂತಾದ ಚಿಕ್ಕಪುಸ್ತಕ ಕೊಂಡಿದ್ದೆ. ಉಚಿತವಾಗಿ ಅಕ್ಕನ ಪ್ರವಚನವನ್ನು ಗುರುಗಳು ಕೊಡುವರೇನೋ ಎಂದು ಕೇಳಿದೆ. ಉಚಿತವಾಗಿ ಕೊಡುವುದಿಲ್ಲವೆಂದು ನಿರಾಕರಿಸಿದ್ದರು. ನಮ್ಮ ಮನೆಯ ಹಿಂದಿನ ರಸ್ತೆಯಲ್ಲೇ ಸುಪ್ರಸಿದ್ಧ ಸಾಹಿತಿ ಓ.ಎನ್. ಲಿಂಗಣ್ಣಯ್ಯ ನವರು ಇದ್ದರು. ಅವರ ಬಳಿ ಆ ಪುಸ್ತಕ ಇದೆ ಎಂದು ತಿಳಿದು ಅವರ ಮನೆಗೆ ಹೋಗಿ ಓದಿ ಕೊಡುವುದಾಗಿ ಹೇಳಿ ಪಡೆದುಕೊಂಡು ಬಂದು ಓದತೊಡಗಿದೆ.

"ಅಕ್ಕನ ಪ್ರವಚನ" ಕೃತಿ ನನ್ನ ಬಾಳಿಗೆ ಬೆಳಕು ತೋರಿತು. ನನ್ನಲ್ಲಿ ಅಮೂಲಾಗ್ರ ಬದಲಾವಣೆಯಾಗ ತೊಡಗಿತು. ಬಿ.ಎಸ್‌ಸಿ ಅಂತಿಮ ವರ್ಷದ ಕೊನೆಯ ತಿಂಗಳುಗಳು. ತಕ್ಷಣವೇ ಗೃಹಬಂಧನ ಕಳಚಿಕೊಳ್ಳುವ ಆಸೆ ಉತ್ಕಟವಾಗಿ ತೊಡಗಿತು. ಕಡೆಯ ಹಂತದ ವಿದ್ಯಾಭ್ಯಾಸ; ದುಡುಕುವುದು ಬೇಡ ಎಂದು ನನ್ನನ್ನೇ ನಾನು ಸಂತೈಸಿಕೊಂಡೆ. ಬಣ್ಣದ ಸೀರೆಗಳು, ಒಡವೆಗಳು ಬೀರು ಸೇರಿದವು. ಬಿಳಿಯ ಸೀರೆಯುಡತೊಡಗಿದೆ. ಹಣೆಯ ಮೇಲೆ ವಿಭೂತಿಯ ಮೂರು ಎಳೆಗಳು ಸದಾ ಕಾಣತೊಡಗಿದವು. ಮನೆಯ ಪೂಜಾ ಸಾಮಗ್ರಿಯಲ್ಲಿದ್ದ ರುದ್ರಾಕ್ಷಿ ಜಪಮಾಲೆ ಚಿನ್ನದ ಸರದ ಬದಲು ಕೊರಳನ್ನಲಂಕರಿಸಿತು. ಈ ಬದಲಾವಣೆ ನೋಡಿ ಕಾಲೇಜಿನ ಅಧ್ಯಾಪಕರು, ಸಹಪಾಠಿಗಳಿಗೆ ಅಚ್ಚರಿಯಾದರೆ ನಮ್ಮ ಮನೆಯಲ್ಲಿದ್ದವರಿಗೆ ಗಾಬರಿ ಶುರುವಾಯಿತು. ಇವರೆಲ್ಲ ಚಟಪಟಿಸತೊಡಗಿದರು. ನಮ್ಮ ಸಹಪಾಠಿಗಳಲ್ಲಿ ಇಬ್ಬರು ಮೊದಲಿನಿಂದಲೂ ಮೂರ್ಳೆ ವಿಭೂತಿ ಹಚ್ಚಿಕೊಂಡೇ ಬರುತ್ತಿದ್ದರು. ಬಾಲ್ಯದಿಂದಲೂ ಅವರಿಗೆ ಅದು ಅಭ್ಯಾಸ. ನಮ್ಮ ಮನೆಯಲ್ಲಿನ ಕಡ್ಡಾಯ ಆಚರಣೆಯಂತೆ ಇಷ್ಟಲಿಂಗಾರ್ಚನೆ ಮಾಡಿದರೂ ಹೊರಗೆ ಹೋಗುವಾಗ ವಿಭೂತಿಯನ್ನು ಅಳುಕಿಸಿಕೊಂಡು ಸ್ನೋ, ಪೌಡರ್, ಕುಂಕುಮ ಹಚ್ಚಿಕೊಂಡು ಹೋಗುತ್ತಿದ್ದೆ. ಹೀಗಾಗಿ ನನ್ನ ಬದಲಾವಣೆ ಎಲ್ಲರಿಗೂ ಆಶ್ಚರ್ಯ ಹುಟ್ಟಿಸಿತು. ಯಾರೂ ವ್ಯಂಗ್ಯವಾಡುತ್ತಿರಲಿಲ್ಲ ಬೆರಗಾಗಿ ನೋಡುತ್ತಿದ್ದರು.

ಅಕ್ಕಮಹಾದೇವಿಯ ಶರಣ ಸತಿ ಭಾವದ ಹಂಬಲ ನನ್ನ ಮನದ ಮೇಲೆ ಅಪಾರ ಪ್ರಭಾವ ಬೀರತೊಡಗಿತು. 'ಶರಣ ಸತಿ -ಲಿಂಗಪತಿ' ಭಾವದಿಂದ ಇಷ್ಟಲಿಂಗದ ಆರಾಧನೆಯಲ್ಲಿ ತೊಡಗಿದೆ. ನನ್ನ ಪತಿಯ ಹೆಸರು "ಸಚ್ಚಿದಾನಂದ" ಎಂದು ಆಯ್ಕೆ ಮಾಡಿಕೊಂಡೆ. ಪೂಜ್ಯ ಸ್ವಾಮೀಜಿಯವರ ಜೊತೆ ಚರ್ಚಿಸುವಾಗ ಅವರು ದೇವರ ಸ್ವರೂಪ ಸಚ್ಚಿದಾನಂದ ಎಂದು ವಿವರಿಸಿದ್ದರು. ಒಂದು ವಸ್ತುವಿನ ಗುಣ ಬೇರೆ, ಸ್ವರೂಪ ಬೇರೆ. ಗುಣವಿಲ್ಲದೆ ವಸ್ತು ಇರಬಲ್ಲುದು ಕಾವಿ ಬಣ್ಣ ಬಟ್ಟೆಯ ಗುಣ, ಅಡ್ಡ ಉದ್ದ ಎಳೆಗಳು ವಸ್ತುವಿನ ಸ್ವರೂಪ. ಬಣ್ಣ ತೆಗೆದರೂ ಬಟ್ಟೆ ಇರಬಲ್ಲುದು. ಅಡ್ಡ ಉದ್ದ ಎಳೆ ತೆಗೆದರೆ ಬಟ್ಟೆ ಇರಲಾರದು. ಸತ್-ಚಿತ್-ಆನಂದ ಪರಮಾತ್ಮನ

ಅರಗಿನ ಗೊಂಬೆಯನ್ನು ಬೆಂಕಿಯ ನಾಲಿಗೆ ಹೊಡೆದು ಮಾತಾಡುವ ಸರಸಬೇಡ; ಬೆಣ್ಣೆಯಿಂದ ಬೆನಕನನ್ನು ಮಾಡಿ ಕೆಂಡದ ಉಂಡೆಗಳನ್ನು ಅದರ ಮೇಲೆ ಎಸೆದರೆ ಅದು ಕರಗದೆ ಇರುವುದೆ? ಲಿಂಗದೇವನ ಶರಣರೊಡನೆ ಸರಸವಾಡುವುದು, ನೋಯಿಸುವುದು ಅಪಹಾಸ್ಯ ಮಾಡುವುದು, ಅವಮಾನ ಮಾಡುವುದು ಅತ್ಯಂತ ಅಪಾಯಕಾರಿ; ವಿರಸಕ್ಕೆ ಕಾರಣವಾಗುವುದಷ್ಟೇ ಅಲ್ಲ ದೇವರ ಕೋಪಕ್ಕೂ ಕಾರಣವಾಗುವುದು.

661. ಶರಣರೊಡನೆ ಸರಸ ಅಪಾಯಕಾರಿ.

ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸಿಕೊಂಡಂತೆ,
ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ,
ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಾಲೆಯಾಡುವಂತೆ
ಲಿಂಗದೇವನ ಶರಣರೊಡನೆ ಮರೆದು ಸರಸವಾಡಿದಡೆ,
ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ !

– ಬ.ವ.ದೀ 660

ಶರಣರ ಜೊತೆಗೆ ಸರಸವಾಡಬಾರದು. ಅದು ಹಾವಿನ ಹೆಡೆಯನ್ನು ತೆಗೆದುಕೊಂಡು ಕೆನ್ನೆ ನವೆಯಾಯಿತೆಂದು ತುರಿಸಿಕೊಂಡಂತೆ, ಉರಿಯುವ ಕೊಳ್ಳಿಯನ್ನು ತೆಗೆದುಕೊಂಡು ತಲೆಕೂದಲಿನ ಸಿಕ್ಕ ಬಿಡಿಸಿಕೊಂಡಂತೆ, ಹುಲಿಯ ಮೀಸೆಯ ಹಿಡಿದು ಪ್ರೀತಿಯಿಂದ ಉಯ್ಯಾಲೆಯ ನಾಡುವಷ್ಟು ಅಪಾಯಕಾರಿ. ಶರಣರೊಡನೆ ಅರಿತಾಗಲಿ ಅಂದರೆ ಉದ್ದೇಶಪೂರ್ವಕವಾಗಿ ಆಗಲಿ ಮರೆತಾಗಲಿ ಹುಡುಗಾಟವಾಡಿದರೆ ಸುಣ್ಣದ ಕಲ್ಲನ್ನು ಮಡಿಲಲ್ಲಿ ಕಟ್ಟಿಕೊಂಡು ನೀರಿನಲ್ಲಿ ಮುಳುಗಿದಂತೆ ಬೆಂದು ಹೋಗುವನು. ಶರಣರು ಪವಿತ್ರಾತ್ಮರು ಸಜ್ಜನರು. ಅವರಿಗೆ ಅಪಮಾನ ಮಾಡುವುದಾಗಲಿ, ನೋಯಿಸುವುದಾಗಲಿ, ಅಪಹಾಸ್ಯ ಮಾಡುವುದಾಗಲಿ ಅವರಿಗೆ ಮೋಸ ಮಾಡುವುದಾಗಲಿ ಸಲ್ಲದು. ಏಕೆಂದರೆ ಅವರು ಕ್ಷಮಾಗುಣ ಉಳ್ಳವರಾಗಿ ಕ್ಷಮಿಸಿದರೂ ಅವರಿಗೆ ನೋವುಂಟು ಮಾಡಿದವರನ್ನು ದೇವರು ಕ್ಷಮಿಸಲಾರ. ದೇವರು ಶರಣರಿಗೆ ನೀಡಿದ ನೋವು ತನ್ನ ನೋವು ಎಂದು ಭಾವಿಸಿ, ನೋಯಿಸಿದವರಿಗೆ ಸೂಕ್ತವಾದ ಶಿಕ್ಷೆ ನೀಡುವನು.

662. ಸರಸವಾಡಿದರೆ ನರಕ

ಉರಿವ ಕೊಳ್ಳಿಯ ಮಂಡೆಯಲ್ಲಿಕ್ಕಿದಡೆ ಉರಿವುದು ಮಾಣ್ಬುದೆ?
ಕಲ್ಲು ಗುಗ್ಗರಿಯ ಮೆಲಿದಡೆ ಹಲ್ಲು ಹೋಹುದು ಮಾಣ್ಬುದೆ?
ಶರಣರೊಡನೆ ಸರಸವಾಡಿದಡೆ ನರಕ ತಪ್ಪದು ಕಾಣಾ, ಲಿಂಗದೇವಾ!

– ಬ.ವ.ದೀ 661

ಹಿಂದಿನ ಎರಡು ವಚನಗಳ ಭಾವವೇ ಮುಂದುವರಿದಿದೆ. ಉರಿಯುವ ಕೊಳ್ಳಿಯನ್ನು ತೆಗೆದುಕೊಂಡು ತಲೆಯ ಕೂದಲಿಗೆ ಸೋಂಕಿಸಿದರೆ ಅದು ಉರಿಯದೇ ಇರುವುದೆ? ಕಲ್ಲಿನ ಹರಳಿನಿಂದ ಗುಗ್ಗರಿಯನ್ನು ಮಾಡಿ ಬಾಯಲ್ಲಿ ಹಾಕಿಕೊಂಡು ಅಗಿದರೆ ಹಲ್ಲು ಉದುರದೆ

ಶುರುವಾಯಿತು. ನನ್ನ ಮನಸ್ಸು ಈಗಾಗಲೇ ಶರಣ ಸತಿ ಭಾವವನ್ನು ಹೊಂದಿ ಲಿಂಗಪತಿಯಲ್ಲಿ ಅನುರಕ್ತವಾಗಿತ್ತು. ಅಕ್ಕನ ವಚನ ;

ಇಹಕ್ಕೊಬ್ಬ ಗಂಡನೆ, ಪರಕ್ಕೊಬ್ಬ ಗಂಡನೆ?
ಲೌಕಿಕಕ್ಕೊಬ್ಬ ಗಂಡನೆ, ಪಾರಮಾರ್ಥಕ್ಕೊಬ್ಬ ಗಂಡನೆ?
ಎನ್ನ ದೇವ ಚನ್ನಮಲ್ಲಿಕಾರ್ಜುನ ನಲ್ಲದ
ಮಿಕ್ಕಿದ ಗಂಡರೆಲ್ಲ
ಮುಗಿಲ ಮರೆಯ ಬೊಂಬೆಯಂತೆ !

ಮನದಲ್ಲಿ ಬೇರೂರಿತ್ತು. "ಅಜ್ಜಿಯನ್ನು ಕೊಲ್ಲುವುದೂ ಆಗದು; ನಾನು ಸಾಯಲು ಹುಟ್ಟಿಲ್ಲ ಇನ್ನು ಮದುವೆಯಾಗುವುದು ಆಗದ ಮಾತು. ಆದ್ದರಿಂದ ಈ ಸಮಸ್ಯೆಗೆ ಒಂದೇ ಪರಿಹಾರ ಗೃಹತ್ಯಾಗ" ಎಂದು ನಿರ್ಧರಿಸಿಕೊಂಡಿದ್ದೆ.

ಬೆಳಗಿನ ಜಾವ ಮೂರುಗಂಟೆಗೆ ಎದ್ದು ಸ್ನಾನ -ಪೂಜೆ ಮಾಡಿ ಬೆಳಕು ಹರಿಯುವುದರ ಒಳಗೆ ಐದರಿಂದ ಆರರ ಸಮಯದಲ್ಲಿ ವಾಯುವಿಹಾರಕ್ಕೆ ಹೋಗುವ ಅಭ್ಯಾಸ ರೂಢಿಸಿಕೊಂಡಿದ್ದೆ. ದಿ.19-8-1965 ಬೆಳಗಿನ ಜಾವ ಪೂಜೆ ಮುಗಿಸಿದೆ. ತಾಯಿಯವರು ಎದ್ದು ಸ್ನಾನಕ್ಕೆ ನಡೆದರು. ಒಂದು ಜೊತೆ ಬಟ್ಟೆ, ನಾಲ್ಕಾರು ಪುಸ್ತಕಗಳನ್ನು ಒಂದು ಬಟ್ಟೆಯ ಕೈ ಚೀಲದಲ್ಲಿ ಹಾಕಿಕೊಂಡೆ. ಹೊರಡುವಾಗ ಸ್ವಾಮಿ ವಿವೇಕಾನಂದರ ಭಾವಚಿತ್ರ, ಗೋಡೆಯ ಮೇಲೆ ರಾರಾಜಿಸುತ್ತಿತ್ತು. ಅದಕ್ಕೆ ಕೈ ಮುಗಿದು ಕೇಳಿಕೊಂಡೆ.ಮೊದಲು ಇಷ್ಟಲಿಂಗಕ್ಕೆ ನಮಸ್ಕರಿಸಿ ಬೇಡಿಕೊಂಡೆ.
"ದೇವರೇ, ನಿನ್ನನ್ನು ನಂಬಿ ನಾನು ಹೊರಡುತ್ತಿದ್ದೇನೆ. ಕೊಲ್ಲುಕಾಯಿ ನಿಮ್ಮ ಧರ್ಮ.
"ಗುರುದೇವಾ, ನಿಮ್ಮನ್ನು ಆದರ್ಶವಾಗಿ ಇಟ್ಟುಕೊಂಡಿದ್ದೇನೆ.
ಮೇಲೆತ್ತು ಮೇಲೆತ್ತು ಓ! ಎನ್ನ ಮನದ ಮೂರ್ತಿ ವಿಶ್ವದಾ ದಿವ್ಯ ಕೀರ್ತಿ
....
ನನಗಿಂದು ಮಾರ್ಗದರ್ಶನವ ತೋರಲ್ಕೆ
ನಿನ್ನೊಂದು ರೂಪವಂ ಗುರುವಾಗಿ ತೋರೆಲೆ ತಂದೆ!
ಬಾಳನ್ನು ರೂಪಿಸಲು ಗುರು ಓರ್ವ ಬೇಕೆನಗೆ
ವಿವೇಕಾನಂದ, ಸಚ್ಚಿದಾನಂದ ದರ್ಶನ ಮಾರ್ಗದರ್ಶಕನಾಗು

(ಮಾತೃವಾಣಿ)

ಸ್ವಾಮಿ ವಿವೇಕಾನಂದರ ಸಾಹಿತ್ಯವನ್ನೇ ನಾನು ಹೆಚ್ಚಾಗಿ ಓದಿದ್ದು, ಅವರೇ ನನಗೆ ಮಾದರಿ ಯಾಗಿದ್ದರು. ತಾಯಿಯವರು ಒಬ್ಬಂಟಿಯಾಗಿದ್ದರು, ನಿಸ್ಸಹಾಯಕರಾಗಿದ್ದರು. ಪತಿಯನ್ನು ಬಹಳ ಬೇಗನೆ ಕಳೆದುಕೊಂಡ ಅವರಿಗೆ ನಾನು ಮತ್ತು ನನ್ನ ತಮ್ಮನೇ ಜೀವಾಳ. ಅವನು ನಿರೀಕ್ಷೆಗೆ ತಕ್ಕಂತೆ ರೂಪುಗೊಳ್ಳಲಿಲ್ಲ; ಹೀಗಾಗಿ ನಾನೇ ಅವರಿಗೆ ಆಸರೆಯಾಗಿದ್ದೆ, ಧೈರ್ಯದ ಊರು ಗೋಲಾಗಿದ್ದೆ. ಇಂಥ ತಾಯಿಗೆ ನೋವುಂಟು ಮಾಡಿ ಹೋಗುವುದೆ? ಒಂದರೆ ಕ್ಷಣ ವಿಚಾರ ಮಾಡಿದೆ. ದೊಡ್ಡ ಉದ್ದೇಶ ಸಾಧಿಸಲು ಮನಸ್ಸನ್ನು ಕಠೋರ ಮಾಡಿಕೊಳ್ಳಲೇ ಬೇಕು. ಬುದ್ಧ ಒಂದು ರಾಜ್ಯದ ಅಧಿಕಾರವನ್ನು ಪ್ರೀತಿಯ ಮಡದಿ ಮಗುವನ್ನು ತೊರೆದ. ಅಂಥ ಕಾಠಿಣ್ಯದ

ಅಷ್ಟಾವರಣಗಳಲ್ಲಿ ಹೊರಗಿನ ಲಾಂಛನಗಳೆಂದರೆ ಇಷ್ಟಲಿಂಗ, ವಿಭೂತಿ ಮತ್ತು ರುದ್ರಾಕ್ಷಿ ಇಷ್ಟಲಿಂಗವನ್ನು ಅಂಗದ ಮೇಲೆ ಕಟ್ಟಿಕೊಳ್ಳಲಾಗುವುದು. ಮುಟ್ಟಿ ಪೂಜಿಸಲಾಗುವುದು; ವಿಭೂತಿಯನ್ನು ದೇಹದ ಮೇಲೆ ಪೂಸಿಕೊಳ್ಳಲಾಗುವುದು. ಇವೆಲ್ಲ ಭೌತಿಕ ಕ್ರಿಯೆಗಳನ್ನು ಮಾಡಿದರೇನಂತೆ ಮನಸ್ಸು ಈ ಕ್ರಿಯೆಗಳಲ್ಲಿ ತಲ್ಲೀನವಾಗದಿದ್ದರೆ ಎಲ್ಲಕ್ಕೂ ಮುಖ್ಯವಾದುದು ಭಾವಶುದ್ಧಿ ಭಾವಶುದ್ಧಿಯಾದರೆ ಮಾತ್ರ ಅಲ್ಲಿ ಭಕ್ತಿನೆಲೆಗೊಳ್ಳುವುದು. ಲಿಂಗದೇವನೊಲಿದವನಿಗೆ ಮಾತ್ರ ಭಾವಶುದ್ಧಿ ಸಿದ್ಧಿಸುವುದು. ಇಲ್ಲಿ ಒಂದು ಪ್ರಶ್ನೆ ಉದ್ಭವಿಸುವುದು. ಭಾವ ಶುದ್ಧಿಯಾದಾಗ ಲಿಂಗದೇವನೊಲಿಮೆ ಸಿದ್ಧಿಸುವುದೋ ಅಥವಾ ಲಿಂಗದೇವನೊಲಿಮೆಯಾದಾಗ ಭಾವಶುದ್ಧಿ ಸಾಧಿಸುವುದೊ? ಇವೆರಡೂ ಒಂದಕ್ಕೊಂದು ಪೂರಕ. ಕೊಡದೊಳಗಣ ಗಾಳಿ ಹೊರ ಹೋಗುತ್ತಿರುವಂತೆ ನೀರು ಹೇಗೆ ತುಂಬಿಕೊಳ್ಳುವುದೋ ಹಾಗೆ ಸಾಧಕನಲ್ಲಿ ಭಾವಶುದ್ಧಿ ಆದಂತೆ ಲಿಂಗದೇವನೊಲಿಮೆ ಪ್ರಾಪ್ತಿಯಾಗುವುದು ಎನ್ನಬಹುದು,

657. ಲಿಂಗಭಕ್ತನೇ ಕುಲಜನು

ಶ್ವಪಚನಾದಡೇನು? ಲಿಂಗಭಕ್ತನೇ ಕುಲಜನು.
ನಂಬಿ ನಂಬದಿದ್ದಡೆ ಸಂದೇಹಿ, ನೋಡಾ.
ಅವರ ನಡೆಯೊಂದು ನುಡಿಯೊಂದಾದಡೆ
ಶಿವಾಚಾರಕ್ಕವರು ಸಲ್ಲರಯ್ಯಾ!
ಬಲ್ಲನು, ಸಾತ್ವಿಕರಲ್ಲದವರನೊಲ್ಲನು;
ಶಿವಾಚಾರವ ಬಲ್ಲನು, ಅಲ್ಲಿ ನಿಲ್ಲನು
ಪ್ರಪಂಚಿಯ ಮನವನೊಲ್ಲನು ಲಿಂಗದೇವನು.

– ಬ.ವ.ದೀ 656

ಇಷ್ಟಲಿಂಗವೆಂಬ ಲಾಂಛನ, ಉಳಿದ ಏಳು ಆವರಣ ಕೊಡುವ ಮೂಲಕ ಎಲ್ಲ ಜಾತಿ ಕುಲಗಳವರನ್ನೂ ಗುರು ಬಸವಣ್ಣನವರು ಲಿಂಗಾಯತ ಸಮಾಜದೊಳಕ್ಕೆ ತೆಗೆದುಕೊಳ್ಳುತ್ತಿದ್ದರು. ಆಗ, ಮೇಲ್ಜಾತಿಯಿಂದ ಬಂದವರು ಶೂದ್ರ, ಅಸ್ಪೃಶ್ಯ ಜಾತಿಯಿಂದ ಬಂದವರೊಡನೆ ವ್ಯವಹರಿಸಲು ಹಿಂದೆ ಮುಂದೆ ನೋಡುತ್ತಿದ್ದರು. ಇದು ಗುರು ಬಸವಣ್ಣನವರಿಗೆ ತುಂಬಾ ನೋವನ್ನು ಉಂಟು ಮಾಡುತ್ತಿತ್ತು. ಅಂಥ ಸನ್ನಿವೇಶದಲ್ಲಿ ಹೇಳುತ್ತಾರೆ. "ಇಷ್ಟಲಿಂಗ ದೀಕ್ಷೆ ಪಡೆದವನೇ ಕುಲಜನು ಇದನ್ನು ನಂಬಿರಿ, ನಂಬದೆ ಸಂದೇಹಿಗಳಾಗಬೇಡಿರಿ. ಹಾಗೆ ಭೇದ ಮಾಡಿದರೆ ಅವರ ನಡೆ-ನುಡಿಗಳಲ್ಲಿ ದ್ವಂದ್ವ ನಿಲುವು ಉಂಟಾಗುತ್ತದೆ. ಇಂಥ ಸಂದೇಹಿಗಳು ಶಿವಾಚಾರಕ್ಕೆ ಸಲ್ಲರು. ಶಿವಾಚಾರವೆಂದರೆ ಸಾಮಾಜಿಕ, ಧಾರ್ಮಿಕ ಸಮಾನತಾ ತತ್ತ್ವ; ದೀಕ್ಷೆ ಪಡೆದವರಲ್ಲಿ ಭೇದ ಮಾಡದೆ ವ್ಯವಹರಿಸುವ ಸಾಮಾಜಿಕ ನೀತಿ. ದೇವರು ಎಲ್ಲವನ್ನೂ ಬಲ್ಲ ಸರ್ವಜ್ಞ, ಸಾತ್ವಿಕ ರಲ್ಲದವರನ್ನು ದೇವರು ಒಲ್ಲನು. ಶಿವಾಚಾರವ ಬಲ್ಲ ದೇವನು ಭೇದ ಮಾಡುವವರನ್ನು ಒಲ್ಲನು ಪ್ರಾಪಂಚಿಕ ಮನಸ್ಸನ್ನು ಹೊಂದಿ, ಸಂದೇಹಪಟ್ಟು, ಇನ್ನಿತರ ಶರಣರಲ್ಲಿ ಭೇದವನ್ನು ಮಾಡುವವರನ್ನು ಲಿಂಗದೇವನು ದೂರವಿಡುವನು.

ಕಟ್ಟಡ; ಪ್ರಶಾಂತ ವಾತಾವರಣ. ನೀರಿಗಾಗಿ ಭಾವಿ ತೋಡಿ ಅದಕ್ಕೆ ಹೊಂದಿಕೊಂಡಂತೆ ಒಂದು ಗವಿಯನ್ನು ಕಟ್ಟಿಸಲಾಗಿತ್ತು. ಏಕಾಂತದ ಧ್ಯಾನಕ್ಕಾಗಿ ಸ್ವಾಮೀಜಿ ವ್ಯವಸ್ಥೆ ಮಾಡಿಕೊಂಡಿದ್ದರು. ಅಂದು ಒಂದು ದಿನ ಯಾವ ಸಮಸ್ಯೆಯೂ ಇಲ್ಲದೆ ಕಳೆಯಿತು. ಮರುದಿವಸ ಹೇಗೋ ವಿಳಾಸ ಪತ್ತೆ ಮಾಡಿದ್ದರು. ನಾನು ಓದುತ್ತಿದ್ದ ಪುಸ್ತಕಗಳಿಂದ ಸಂಗ್ರಹಿಸಿರಬಹುದು. ನಮ್ಮ ಪೂರ್ವಾಶ್ರಮದ ಸಂಬಂಧಿ - ದೊಡ್ಡಪ್ಪನ ಮಗಳು ಜಯಮ್ಮ ಮತ್ತು ಉಪನ್ಯಾಸಕರಾದ ಶ್ರೀ ತಿಪ್ಪೇರುದ್ರಪ್ಪ ದಾವಣಗೆರೆಯಲ್ಲಿದ್ದರು. ಅವರಿಗೆ ತಾತಂದಿರು ಫೋನ್ ಮಾಡಿದರು. ವಿಳಾಸ ಹುಡುಕಿಕೊಂಡು ಬಂದ ಅವರು ಸಹಜವಾಗಿ ಮನೆಗೆ ಬರುವಂತೆ ಕರೆದರು. ನಾನಲ್ಲಿ ಇರುವಾಗಲೇ ತಾತಂದಿರು ಕಾರು ತೆಗೆದುಕೊಂಡು ಬಂದೇ ಬಿಟ್ಟರು. ಅದನ್ನು ಕಂಡ ನಾನು ಹಿಂದಿನ ಬಾಗಿಲಿನಿಂದ ಹೊರಬಿದ್ದು ಓಡುತ್ತ ಓಡುತ್ತ ಮಠವನ್ನು ಸೇರಿಕೊಂಡೆ. ಮನೆಯಲ್ಲಿ ಚರ್ಚೆಯಾದರೆ ನಾನು ಒಂಟಿ. ಮಠದಲ್ಲಾದರೆ ಯಾರಾದರೂ ನನ್ನ ಸಹಾಯಕ್ಕೆ ಬರಬಹುದು ಎಂಬುದು ನನ್ನ ಆಲೋಚನೆ. ಸ್ವಲ್ಪ ಹೊತ್ತಿನಲ್ಲೇ ಬಂಧುಗಳ ಮನೆಯಲ್ಲಿ ಊಟವನ್ನು ಪೂರೈಸಿ ತಾತಂದಿರು ವಿಶ್ವಕಲ್ಯಾಣ ಮಂಟಪಕ್ಕೆ ಬಂದೇ ಬಿಟ್ಟರು. ಪೂಜ್ಯ ಗುರುಗಳ ಸಮ್ಮುಖದಲ್ಲೇ ಚರ್ಚೆ, ವಾದ -ವಿವಾದ ಜರುಗಿದವು.

"ಮನೆ - ಕಾಲೇಜು ಬಿಟ್ಟು ಇನ್ನೊಂದು ದಾರಿ ತುಳಿದವಳಲ್ಲ. ಅದು ಹೇಗೆ ನಿನಗೆ ಮನೆ ಬಿಟ್ಟು ಬರುವ ಧೈರ್ಯವಾಯಿತು?" ತಾತ ಶಂಕರಪ್ಪನವರ ಪ್ರಶ್ನೆ

"ನಮ್ಮ ಮನೆತನದ ಮರ್ಯಾದೆ ಕಳೆದೆ." ಚಿಕ್ಕತಾತ ಶಿವಣ್ಣನವರ ವಾದ

"ಮನೆತನದ ಮರ್ಯಾದೆ ಏಕೆ ಹೋಗುತ್ತೆ? ನಾನೇನು ಕೆಟ್ಟ ಕೆಲಸಕ್ಕೆ ಮನೆಯಿಂದ ಹೊರ ಬಂದಿದ್ದೇನೆಯೆ? ಉದಾತ್ತಗುರಿ ಇಟ್ಟುಕೊಂಡು ಬಂದಿದ್ದೇನೆ.

"ಕೌಪೀನವಂತ ಖಲುಭಾಗ್ಯವಂತ ಎಂಬ ನಾಣ್ನುಡಿ ಇದೆ. ಒಬ್ಬನು ಸನ್ಯಾಸಿಯಾದರೆ ಅವನ ಮನೆತನದ ಕೀರ್ತಿ ಬೆಳಗುತ್ತದೆ." ನನ್ನ ಉತ್ತರ.

"ಜನರಿಗೆ ಏನು ತಿಳಿಯುತ್ತದೆ. ಮನೆ ಬಿಟ್ಟು ಯಾರ ಹಿಂದೆಯೋ ಓಡಿ ಹೋದಳು ಎಂದು ಜನ ಆಡಿಕೊಳ್ಳುತ್ತಾರೆ."

"ಜನರಿಗಾಗಿ ನಾವು ಬದುಕಬಾರದು. ನಮ್ಮ ಅಂತಃ ಸಾಕ್ಷಿಗನುಗುಣವಾಗಿ ನಾವು ಬದುಕಬೇಕು."

"ಬಸವಣ್ಣನವರು ಸಂಸಾರಿಯಾಗಿ ಸಾಧನೆ ಮಾಡಲಿಲ್ಲವೆ? ಸಂಸಾರದಲ್ಲಿದ್ದೂ ಸಾಧಿಸಬಹುದು."

"ಅಂಥ ದೊಡ್ಡವರ ಕೂಡ ಹೋಲಿಸಿಕೊಳ್ಳಬಾರದು. ಅಂಥ ಸಾಮರ್ಥ್ಯ ಯುಗಪುರುಷರಿಗಷ್ಟೆ ಸಾಧ್ಯ. ಸಂಸಾರ ಒಂದು ಸರಪಳಿಯ ಬಂಧನ. ಮದುವೆ ಒಂದು ಸುತ್ತು, ಗಂಡ ಇನ್ನೊಂದು, ಮಕ್ಕಳು ಮತ್ತೊಂದು; ಹೀಗೆ ಸುತ್ತುಗಳು ಜಾಸ್ತಿಯಾಗುತ್ತ ಹೋಗುತ್ತವೆ."

"ನಿನ್ನ ತಾಯಿ ಮುಗ್ಧೆ. ನಿನ್ನಲ್ಲೇ ಪ್ರಾಣವಿಟ್ಟುಕೊಂಡಿದ್ದಾಳೆ. ಅಂಥ ತಾಯಿಗೆ ದ್ರೋಹ ಬಗೆಯುವುದೆ ?"

"ಏನು ಮಾಡುವುದು? ಅವರವರಿಗೆ ಜ್ಞಾನೋದಯವಾದಾಗ, ದೇವರ ಕರೆ ಬಂದಾಗ ಅವರು ಸಾಗಲೇ ಬೇಕಾಗುತ್ತದೆ. ಅಧ್ಯಾತ್ಮಿಕ ಪ್ರೇರಣೆ ಸಾಲಿನಲ್ಲಿ ನಿಂತು ಕಾಯುವಾಗ ಅವರ ಸರತಿ ಬಂದಂತೆ ಈ ಸಂಬಂಧಗಳೆಲ್ಲ ಈ ಲೋಕದ ತೋರಿಕೆಯ ಸಂಬಂಧಗಳು. ಮದುವೆಯಾದರ ತಾಯಿಯನ್ನು ಬಿಟ್ಟು ಹೋಗಲೇಬೇಕಲ್ಲವೆ?"

ನೀಡುವನು. ಇದು ಕಾಯಿಲೆಯಾದವನಿಗೆ ಔಷಧಿ ಕೊಡುವಂತೆ, ಅವನು ವಿಶೇಷ ಸಭೆಯನ್ನು ಏರ್ಪಡಿಸಿ ಜಂಗಮರನ್ನು ಬರಮಾಡಿ ಕೊಳ್ಳುವನು. ಆಗ ಜಂಗಮರು ಕೊಡುವ ಜ್ಞಾನ ಶಸ್ತ್ರ ಚಿಕಿತ್ಸೆಯಂತೆ. ಶಸ್ತ್ರ ಚಿಕಿತ್ಸೆ ಒಳಗಿನ ಗಡ್ಡೆಯನ್ನು ತೆಗೆಯುವಂತೆ ಜಂಗಮರ ಜ್ಞಾನವು ಮೂಢನಂಬಿಕೆ, ಬಹುದೇವತೋಪಾಸನೆ, ಜಾತೀಯತೆ, ಕಂದಾಚಾರ, ನಾಸ್ತಿಕತೆ ಮುಂತಾದ ಗಡ್ಡೆಗಳನ್ನು ತೆಗೆಯುತ್ತದೆ ಹೀಗೆ ಗುರು - ಜಂಗಮರಿಂದ ಭವರೋಗವು ನಿವಾರಣೆಯಾಗುತ್ತದೆ. ಲಿಂಗದೇವನ ಶರಣರು ನಡೆಸುವ ಅನುಭವಗೋಷ್ಠಿಗಳು ಗುರು-ಜಂಗಮರು ನಿರ್ವಹಿಸುವ ಕೆಲಸವನ್ನು ನಿರ್ವಹಿಸುತ್ತವೆ. ಅವು ಮಡಿವಾಳನ ಕಾಯಕದಂತೆ! ಮಡಿವಾಳನು ಮಲಿನವಾದ ಬಟ್ಟೆಗಳನ್ನು ನೀರಿನಲ್ಲಿ ತೋಯಿಸಿ, ಅವಕ್ಕೆ ಸಾಬೂನು ಹಚ್ಚಿ ತಿಕ್ಕಿ, ಚೆನ್ನಾಗಿ ಎತ್ತಿ ಒಗೆದು. ನಂತರ ಹಿಂಡಿ ಒಣಗಿಸಿ ಶುಭ್ರಗೊಳಿಸುತ್ತಾನೆ. ಅದೇ ರೀತಿ ಗುರು -ಜಂಗಮರು, ಶರಣರ ಅನುಭವ ಗೋಷ್ಠಿಗಳು ಭವರೋಗದಿಂದ ಪೀಡಿತವಾದ ಹೃದಯಗಳ ಬಟ್ಟೆಗಳನ್ನು ಜ್ಞಾನದ ನೀರಿನಲ್ಲಿ ತೋಯಿಸಿ, ಭಕ್ತಿಯ ಸಾಬೂನು ಹಚ್ಚಿ, ಸದಾಚಾರದ ಒಗೆತ ಮಾಡಿ, ದೀಕ್ಷೆಯಿಂದ ಒಣಗಿಸಿ ಶುಭ್ರಗೊಳಿಸುತ್ತವೆ. ನಿರಂತರವಾಗಿ ಸಾಧಕನು ಶರಣರ ಸತ್ಸಂಗದಲ್ಲಿರಬೇಕು. ವಚನ ಸಾಹಿತ್ಯವು ಶರಣರ ಸತ್ಸಂಗಕ್ಕೆ ಅತಿ ಹೆಚ್ಚಿನ ಸ್ಥಾನಕೊಟ್ಟರೂ ಲಿಂಗಾಯತ ಸಮಾಜದಲ್ಲಿ ಅದು ಅನುಷ್ಠಾನಕ್ಕೆ ಬರದೇ ಇರುವುದು ದುರದೃಷ್ಟಕರ.

654. ಉಪದೇಶದ ಮಹಿಮೆ

ಕೇಳಿರೆ, ಕೇಳಿರೆ, ಹಿರಿಯರು ಗುರುವಿನುಪದೇಶವನು,
ಒಂದು ಗೀಜಗನ ಉಪದೇಶದಿಂದ
ಪೌಲಸ್ತ್ಯನಂದು ಹಡೆಯನೆ ದಶಮುಖನ?
ಶಿರವ ಹರಿದಿಕ್ಕೆ ಪರಮನಿದ್ದಡೆಯು ಕಾಣದೇನಿಳೆಯಲ್ಲಿ?
ಕರುಳ ತಂತಿಯುಪದೇಶದಿಂದೆ
ಅಸುರನಂದು ಹಡೆಯನೆ ಸುರಪದವನಂದು ದಶಮುಖನು.
ತರುಣಿ ಹರಿಣಿಯುಪದೇಶದಿಂದೆ ಗತಿಪಥ ಮುಕ್ತಿಯ ಪಡೆದು
ಬಟ್ಟೆಯ ಹತ್ತನೆ ವಿನಾಶಕ್ತಿರಾಯನು?
ರಂಭೆಯುಪದೇಶದಿಂದೆ
ಶಂಭುವಿನೋಲಗದಲ್ಲಿ ಕುಳ್ಳಿರನೆ ಶ್ವೇತನು?
ನಮ್ಮ ಲಿಂಗದೇವನ ಶರಣರ ಉಪದೇಶವ ಕೇಳಿದವರಿಗೆ
ದುರಿತ ಪಾಪಂಗಳು ಬಿಟ್ಟು ಹೋಗಿ
ಮನ ನಿರತರಾಗಿಪ್ಪರು ಲಿಂಗದಲ್ಲಿ. – ಬ.ವ.ದೀ 653

ಗುರುವಿನಿಂದ ಉಪದೇಶವನ್ನು ಪಡೆಯಲೇಬೇಕು. ಕಿರಿಯರಿರಲಿ ಹಿರಿಯರಿರಲಿ ಗುರುವಿನ ವಾಣಿಯನ್ನು ಕೇಳುವುದು ಅವಶ್ಯಕ. ಕೆಲವೊಮ್ಮೆ ಪ್ರಾಣಿ, ಪಶು, ಪಕ್ಷಿಗಳು ಉಪದೇಶವನ್ನು ನೀಡಬಹುದು ಗ್ರಹಿಸುವ ಮನಸ್ಸಿರಬೇಕು ಅಷ್ಟೆ. ಪೌಲಸ್ತ್ಯನು ರಾವಣನ ತಂದೆ. ಒಂದು ಗೀಜಗನ ಉಪದೇಶವನ್ನು ಪಡೆದು ರಾವಣನಿಗೆ ಜನ್ಮವನ್ನು ಕೊಟ್ಟ ಶಿವನನ್ನು ಕಾಣಬೇಕೆಂದು ರಾವಣ

"ಇರಲಿ, ಒಂದು ದಿವಸ ತಾನೆ? ನಾಳೆ ಕರೆದುಕೊಂಡು ಹೋಗೋಣ" ಎಂದು ಬಂದಿದ್ದ ತಾತಂದಿರು, ವೀರಮ್ಮಜ್ಜಿ ಎಲ್ಲರೂ ಶ್ರೀ ತಿಪ್ಪೇರುದ್ರಪ್ಪನವರ ಮನೆಗೆ ಹೋದರು.

ಗಂಭೀರ ಚಿಂತನೆ

ಅವರೆಲ್ಲ ಹೋದ ಮೇಲೆ ನನ್ನ ವ್ಯಾಕುಲತೆಯನ್ನು ಗುರುಗಳ ಮುಂದೆ ತೋಡಿಕೊಂಡೆ. "ಎಂಥಾ ಪ್ರಸಂಗದಲ್ಲಿಯೂ ಮುಂದಿಟ್ಟ ಹೆಜ್ಜೆಯನ್ನು ಹಿಂದೆ ಇಡಬಾರದೆಂದು ಮಾಡಿದ್ದೆ. ಈಗ ಮನೆಗೆ ಹೋಗುವುದರಿಂದ ನನ್ನ ಸಂಕಲ್ಪ ಸಡಲಿತು, ಹಿನ್ನಡೆಯಾಯಿತು ಎಂಬ ಕೊರಗು ಕಾಡುತ್ತಿದೆ."

"ಇಲ್ಲ, ಹಾಗೆ ಭಾವಿಸಬೇಡಿರಿ. ಸೋತು ಗೆದ್ದಂತೆ ಈಗ ಕೆಲಸ ಮಾಡಬೇಕು. ನಿಮ್ಮ ಧ್ಯೇಯ ಖಚಿತವಾಗಿದ್ದು ಮನಸ್ಸು ದೃಢವಾಗಿದ್ದರೆ ಯಾರೂ ಕದಲಿಸಲಾರರು...."

"ನಿಮಗೆ ಆಶ್ರಯ ಕೊಡಲು ಇಷ್ಟವಿಲ್ಲದಿದ್ದರೆ ಹೇಳಿರಿ. ನಾನು ಇಂದು ರಾತ್ರಿ ಶ್ರೀಶೈಲದತ್ತ ಪ್ರಯಾಣ ಮಾಡುತ್ತೇನೆ. ಅಲ್ಲಿಂದ ಕದಳಿವನಕ್ಕೆ ಹೋಗುತ್ತೇನೆ." ನಾನು ಹೇಳಿದೆ.

"ಅಂಥ ತಪ್ಪು ಮಾಡಬೇಡಿರಿ. ನಿಮ್ಮಂತಹ ಸಾಧಕರಿಗೆ ಆಶ್ರಯ ಕೊಡಲೆಂದೇ ನಾನು ಮಠ ಕಟ್ಟಿರುವುದು. ಅಕ್ಕಮಹಾದೇವಿಯ ಕಾಲದಲ್ಲಿ ಕದಳಿವನ ಯೋಗಿಗಳ ಬೀಡಾಗಿತ್ತು. ಈಗ ಏನಿದೆ ಬರೀ ಕಾಡು; ಕಾಡು ಪ್ರಾಣಿಗಳ ವಾಸಸ್ಥಾನ. ನಿಮ್ಮ ಜೀವನವನ್ನು ವ್ಯರ್ಥ ಮಾಡಿಕೊಳ್ಳುವುದು ಬೇಡ. ತಾಳ್ಮೆ ಇರಲಿ,ಹುಟ್ಟಿ ಬೆಳೆದ ಮನೆ ಅಷ್ಟು ಅಸಹನೀಯವಾಯಿತೆ? ಮನೆಯಲ್ಲಿ ಕೆಲವು ಕಾಲ ಸಾಧನೆ ಮಾಡಿರಿ." ಗುರುಗಳು ಬೋಧೆ ಮಾಡಿದರು.

ಪೂಜ್ಯ ಗುರುಗಳ ಮಾತು ನನ್ನ ಜೀವನಕ್ಕೆ ದಾರಿದೀಪವಾಯಿತು. ಏಕೆಂದರೆ ಸಣ್ಣ ವಯಸ್ಸಿನ ಸಾಧಕರಲ್ಲಿ ಭಾವಾವೇಶ ಜಾಸ್ತಿ, ಲೋಕಾನುಭವ ಕಡಿಮೆ. ಆರಂಭದ ದಿನಗಳಲ್ಲಿ ಕಾಡು ಮೇಡಿನ ವಾಸ, ಉಪವಾಸ ವ್ರತ, ಮೌನಾನುಷ್ಠಾನ, ಶರೀರಕ್ಕೆ ಕಠಿಣ ಸಾಧನೆ -ಇವೆಲ್ಲ ಆದರ್ಶವೆನಿಸುವವು. ಸಾಹಿತ್ಯ ಕೃತಿಗಳಲ್ಲಿ ಕದಳಿವನದ ವರ್ಣನೆ, ಅಕ್ಕಮಹಾದೇವಿಯ ಸಾಧನೆ ಮುಂತಾದವನ್ನು ಓದುವ ಸಾಧಕರು ಹಲವು ಕನಸುಗಳನ್ನು ಕಟ್ಟಿಕೊಳ್ಳುವರು. ಈ ಜಗತ್ತು, ಶ್ರೀಶೈಲದ ದೇವಸ್ಥಾನದ ಪುರೋಹಿತರ ಮತ್ತು ದೇವಸ್ಥಾನ ಸಮಿತಿಯವರ ಹಿಡಿತ, ಹಲವು ವೀರಶೈವ ಮಠಾಧೀಶರ ಕಿರುಕುಳ ಇವುಗಳ ಮಧ್ಯೆ ಪಾರಾಗಲಾರದೆ ಅಕ್ಕನಾಗಮ್ಮ ಎಂಬ ತ್ಯಾಗಿಯ ಓರ್ವ ಶರಣೆ ಮನೋರೋಗಿಯಂತೆ ಜೀವಿಸುತ್ತಿದ್ದಾರೆ. ನೋಡಿದರೆ ಅಯ್ಯೋ ಎನಿಸುತ್ತದೆ. ಓರ್ವ ತ್ಯಾಗಿಯ ಜೀವನ ವ್ಯರ್ಥವಾಯಿತಲ್ಲ ಎಂದು ಮರುಕವಾಗುತ್ತದೆ. ಒಮ್ಮೆ ಪ್ರವಾಸಿಕರ ತಂಡವೊಂದು ಕದಳಿ ವನ ನೋಡಲು ಹೋದಾಗ ಮೇಲಿನ ಬಯಲಲ್ಲಿ ಇದ್ದ ಗಿಡದ ಮೇಲೆ ಅಸ್ಥಿಪಂಜರ ಮತ್ತು ಬಿಳಿಯ ಸೀರೆ ನೇತಾಡುತ್ತಿದ್ದವಂತೆ. ಯಾರೋ ಸಾಧಕಿ ಅಲ್ಲಿ ಹೋಗಿ ಅಲ್ಲಿಯ ತೊಂದರೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರಬಹುದು. ಭಾವೋದ್ವಿಗ್ನತೆಯಿಂದ ನಾನು ಹೋಗುತ್ತೇನೆ ಎಂದಾಗ ಪೂಜ್ಯ ಗುರುಗಳು ಬುದ್ಧಿವಾದ ಹೇಳಿದರು. ಇದನ್ನು ನಾನು ಮರೆಯಲು ಸಾಧ್ಯವಿಲ್ಲ; ಮರುದಿನ ಬೆಳಗಿನ ಜಾವ ದೀಕ್ಷೆ, ಮನಸ್ಸು ಗರಿಗೆದರಿದ ನವಿಲಿನಂತೆ ದೀಕ್ಷೆಗಾಗಿ ಹಂಬಲಿಸುವಾಗ ಇರುಳು ಸರಿಯಿತು.

ಅಂದು ರಾತ್ರಿ ನಿದ್ದೆ ಬರಲಿಲ್ಲ, ಸಾಧಕರ ಜೀವನದ ಅಮೂಲ್ಯ ಘಟನೆಯಾದ "ಗುರು ಕಾರುಣ್ಯ" ಲಭ್ಯವಾಗುವ ಮುಹೂರ್ತವನ್ನು ಮನಸ್ಸು ಕಲ್ಪಿಸಿಕೊಂಡು ಸಂಭ್ರಮಿಸುತ್ತಿತ್ತು; ಬೆಳಗಿನ

ಬಸವ ವಚನಾಮೃತ

650. ಸದಾಚಾರ ಸದ್ಭಕ್ತಿ ಧರ್ಮದ ಜೀವಾಳ

ಸದಾಚಾರ ಸದ್ಭಕ್ತಿಯಿಲ್ಲದವರನೊಲ್ಲನಯ್ಯಾ;
ಅವರಾರಾಧನೆ ದಂಡ!
ನಿಚ್ಚ ನಿಚ್ಚ ಪ್ರಾಯಶ್ಚಿತ್ತನೊಲ್ಲ
ಲಿಂಗದೇವ, ಭೂಭಾರಕರ! – ಬ.ವ.ದೀ 649

ಧರ್ಮದಲ್ಲಿ ವಿಚಾರ ವಿಭಾಗ ಅರ್ಥಾತ್ ಸೈದ್ಧಾಂತಿಕ ವಿಭಾಗ ಮತ್ತು ಆಚಾರ ವಿಭಾಗ ಎಂದು ಎರಡು ಭಾಗಗಳಿರುತ್ತವೆ. ಇವೆರಡೂ ಒಂದು ನಾಣ್ಯದ ಎರಡು ಮುಖಗಳಂತೆ. ಏಕೆಂದರೆ ಆಚಾರದ ಮೂಲಕ ಅನುಷ್ಠಾನಕ್ಕೆ ಬರದೆ ಬರಿದೇ ಮಾತಿನಲ್ಲಿ ಉಳಿದರೆ ಅದು ತತ್ತ್ವಜ್ಞಾನ ಮಾತ್ರ ಎನ್ನಿಸಿಕೊಳ್ಳುವುದು. ವಿಭೂತಿ ರುದ್ರಾಕ್ಷಿ ಇಷ್ಟ ಲಿಂಗ ಧಾರಣೆ–ಇವು ಮತಾಚಾರಕ್ಕೆ ಸಂಬಂಧಿಸಿದವು. ಇವು ಅತ್ಯಗತ್ಯವಾದರೂ ಇವುಗಳಿಗೆ ಒಳಗಿನಿಂದ ಚೈತನ್ಯ ನೀಡುವ ಅಂಶಗಳೆಂದರೆ ಸದಾಚಾರ ಮತ್ತು ಸದ್ಭಕ್ತಿ. ಇವು ಇಲ್ಲದೆ ಮಾಡುವ ಪೂಜೆ ಬರೀ ವ್ಯರ್ಥ ಪರಿಶ್ರಮ. ಇಷ್ಟೇ ಅಲ್ಲ ದಂಡ (penalty) ಕೂಡ. ಕೆಲವರು ದುರಾಚಾರಿಗಳಾಗಿರುವರು, ದುರ್ವ್ಯಸನಿಗಳಾಗಿರುವರು. ಆದರೆ ತಪ್ಪದೆ ಪೂಜೆ ಮಾಡುವರು. ಇವರು ಮಾಡುವ ಪೂಜಾದಿ ಕ್ರಿಯೆಗಳು ನಿತ್ಯ ಪ್ರಾಯಶ್ಚಿತ್ತವಾಗಿ ಬಿಡುವವು. ಅಧ್ಯಾತ್ಮಿಕ ಕ್ರಿಯೆಗೆ ಸೋಪಾನ ನೈತಿಕತೆ. ನೈತಿಕ ಶುದ್ಧಿ ಇಲ್ಲದೆ ಪರಧನ, ಪರಸತಿಯರಿಗೆಳಸಿ ಮಾಡುವ ಅರ್ಚನೆ ದಂಡವಾಗುತ್ತದೆ. ಕೆಲವರು ತಪ್ಪನ್ನು ಒಪ್ಪಿಕೊಂಡು ತಿದ್ದಿಕೊಳ್ಳುವುದಾಗಿ ಮಾತುಕೊಡುವರು; ಪುನಃ ಅದೇ ತಪ್ಪು ಮಾಡುವರು. ಇವರು ಭೂಮಿಗೆ ಭಾರವಾದವರೇ ಅಹುದು. ಇಂಥವರಿಗೆ ಲಿಂಗದೇವನು ಒಲಿಯನು.

651. ಮಾತಿನಂತೆ ಮನವಿಲ್ಲದವರು

ನೂರನೋದಿ ನೂರ ಕೇಳಿದಡೇನು?
ಆಸೆ ಹರಿಯದು, ರೋಷ ಬಿಡದು.
ಮಜ್ಜನಕೆರೆದು ಫಲವೇನು?
ಮಾತಿನಂತೆ ಮನವಿಲ್ಲದ ಜಾತಿ ಡೊಂಬರ ನೋಡಿ
ನಗುವ ನಮ್ಮ ಲಿಂಗದೇವ. – ಬ.ವ.ದೀ 650

ಹಲವರು ದಿನ ನಿತ್ಯ ಧಾರ್ಮಿಕ ಗ್ರಂಥಗಳ ಪಠಣ ಮಾಡುವರು; ಇನ್ನಿತರರು ಮಾಡುವ ಪಠಣವನ್ನು ಶ್ರವಣ ಮಾಡುವರು. ಆದರೆ ಅವರಲ್ಲಿ ಆಸೆ ಅದನ್ನು ಬೆನ್ನು ಹತ್ತಿದ ಸ್ವಾರ್ಥ ಮನೆ ಮಾಡಿರುತ್ತವೆ. ಪರೋಪಕಾರ, ಪರ ಹಿತದ ಚಿಂತನೆಯೇ ಇರದು. ಕೋಪ, ಸೇಡು ತುಂಬಿ ತುಳುಕುತ್ತದೆ. ಇಂಥವರು ಲಿಂಗದೇವನಿಗೆ ಎಷ್ಟು ಮಜ್ಜನಕ್ಕೆರೆದರೂ ಪ್ರಯೋಜನವಿಲ್ಲ. ಮಾತು ನೋಡಿದರೆ ಆದರ್ಶಪೂರ್ಣವಾಗಿರುತ್ತವೆ.

25ನೆಯ ಶರಣ ಮೇಳಕ್ಕೆ 25 ವಿಡಿಯೋ (ಸಿ.ಡಿ)ತಟ್ಟೆ ಹೊರತರುವ ಯೋಜನೆ

ಶರಣ ಬಂಧುಗಳಿಗೆ ಶರಣಾರ್ಥಿ.

ಇದೇ ವರ್ಷದ ಬಸವ ಪಂಚಮಿಯಂದು ಬಸವ ದರ್ಶನ, ಶರಣ ಗೀತಾಂಜಲಿ, ಶರಣ ದರ್ಶನ ಎಂಬ 3 ದೃಶ್ಯ-ಶ್ರಾವ್ಯ ತಟ್ಟೆಗಳನ್ನು ಬಿಡುಗಡೆ ಮಾಡಲಾಗಿದ್ದು, ಅವು ಬಹುಬೇಗನೆ ಜನಪ್ರಿಯವಾಗಿದೆ. ಅವುಗಳಿಗೆ 3 ಜನ ಶರಣ ಬಂಧುಗಳು ಪ್ರಾಯೋಜಕರಾಗಿದ್ದು, ಅವರ ಸಂಕ್ಷಿಪ್ತ ಚಿತ್ರಣವನ್ನು ವೀಡಿಯೋ ತಟ್ಟೆಯಲ್ಲಿ ಕೊಡಲಾಗಿದೆ. ಇದರಿಂದ ಸ್ಪೂರ್ತಿಗೊಂಡ ದಾನಿಗಳು ತಮಗೂ ಅಂಥ ಅವಕಾಶವಿದೆಯೇ ಎಂದು ಕೇಳುತ್ತಿದ್ದಾರೆ. ಇದರಿಂದ ಸ್ಪೂರ್ತಿಗೊಂಡ ಸಂಸ್ಥೆಯು ಶರಣ ಮೇಳದ ಬೆಳ್ಳಿ ಹಬ್ಬಕ್ಕೆ ಪೂಜ್ಯ ಮಾತಾಜಿಯವರ 25 ಪ್ರವಚನದ ವೀಡಿಯೋ ಸಿ.ಡಿ ಮಾಡಲು ಆಲೋಚಿಸುತ್ತಿದೆ. ಒಂದೊಂದರ ಮಾಸ್ಟರ್ ಪ್ರತಿ ತಯಾರಿಸಲು 20,000 (ಇಪ್ಪತ್ತು ಸಾವಿರ)ರೂಗಳ ವೆಚ್ಚ ಬರುತ್ತದೆ. ಆದ್ದರಿಂದ ಒಂದು ರಾಷ್ಟ್ರೀಯ ಬಸವ ದಳದವರು ಒಂದು ಸಿ.ಡಿಯ ವೆಚ್ಚ ಭರಿಸಬಹುದು. ವೀಡಿಯೋ ಕೆಸೆಟ್ಟನಲ್ಲಿ ಆ ರಾಷ್ಟ್ರೀಯ ಬಸವ ದಳದ ಪರಿಚಯ, ಭಾವಚಿತ್ರ ಸಹಿತ ಕೊಡಲಾಗುವುದು. ಕೇವಲ ಬಸವದಳದವರು ಮಾತ್ರವಲ್ಲದೆ ದಾನಿಗಳು ವೈಯಕ್ತಿಕವಾಗಿಯೂ ಕೊಡಬಹುದು. ಈಗಾಗಲೇ ದಾನಿಗಳು ಕೊಟ್ಟು ಮಾದರಿಯಾಗಿದ್ದಾರೆ.

1. ಶರಣ.ಡಾ|| ಸಿ.ಸೋಮಶೇಖರ್, ಜಿಲ್ಲಾಧಿಕಾರಿ, ತುಮಕೂರು.
   ಮತ್ತು ಶರಣೆ. ಸರ್ವಮಂಗಳಾ ಸೋಮಶೇಖರ್ - ಬಸವ ದರ್ಶನ
2. ಶರಣ. ಚಂದ್ರಮೌಳಿ ಎಮ್ಮಿಗನೂರು,ಬೆಂಗಳೂರು.
   ಮತ್ತು ಶರಣೆ. ಹೆಚ್.ಎಸ್. ರೇಣುಕಾ - ಶರಣ ಗೀತಾಂಜಲಿ
3. ಶರಣ ಗಂಗಾಧರ ಶಿರೂರು, ಬೆಂಗಳೂರು.
   ಮತ್ತು ಶರಣೆ. ಸರ್ವಮಂಗಳಾ ಶಿರೂರು - ಶರಣ ದರ್ಶನ

ಆಸಕ್ತಿ ಇರುವ ದಾನಿಗಳು ದಯವಿಟ್ಟು ಸಂಪರ್ಕಿಸಿ. ಅಂಥ ದಾನಿಗಳು ಒಂದು ದಿನದ ಮಟ್ಟಿಗೆ ಚಿತ್ರೀಕರಣದ ಸಲುವಾಗಿ ಬೆಂಗಳೂರಿಗೆ ಬಂದು ಹೋಗಬೇಕಾಗುತ್ತದೆ. ಇಲ್ಲವೇ ಅವರ ಫೋಟೋ ಕಳಿಸಬೇಕಾಗುತ್ತದೆ. ಇದೊಂದು ಶಾಶ್ವತ ಕೊಡುಗೆ ಎಂಬುದು ನಿಮ್ಮ ಉತ್ಸಾಹವನ್ನು ಹೆಚ್ಚಿಸಲಿ.

ಶರಣು ಶರಣಾರ್ಥಿ

ಈ ಯೋಜನೆಗಾಗಿ ಡಿ.ಡಿ./ಚೆಕ್ಕು ಕಳಿಸುವವರು VISHWAKALYANA MISSION CHARITABLE TRUST, BANGALORE ಎಂದು ಬರೆದು ಬಸವ ಮಂಟಪದ ವಿಳಾಸಕ್ಕೆ ಕಳಿಸಬೇಕು.

ಶರಣ. ಪ್ರಭುಪ್ರಸಾದ ಬಂಡಿ
ಉಪಾಧ್ಯಕ್ಷ, ಪ್ರಚಾರ ಸಮಿತಿ
ಬಸವ ಮಂಟಪ,20ನೇ ಮೇನ್ ರೋಡ್,
2ನೇ ಬ್ಲಾಕ್,ರಾಜಾಜಿನಗರ,ಬೆಂಗಳೂರು-10
ದೂರವಾಣಿ: 9742901820

ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 150 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮ ಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.



ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ಮೊ : 08351-268014/268007/268140

27.	27-11-2011	ದೇವ(ಭಾನು)ವಾರ	ಕೊಪ್ಪಳ
28.	28-11-2011	ಶಿವ(ಸೋಮ)ವಾರ	,,
29.	29-11-2011	ಬಸವ(ಮಂಗಳ)ವಾರ	,,
30.	30-11-2011	ಚನ್ನ(ಬುಧ)ವಾರ	ಹುಬ್ಬಳ್ಳಿ
31.	01-12-2011	ಪ್ರಭು(ಗುರು)ವಾರ	ಧಾರವಾಡ
32.	02-12-2011	ಮಾತೃ(ಶುಕ್ರ)ವಾರ	ಮುಮ್ಮಿಗಟ್ಟಿ
33.	03-12-2011	ಶರಣ(ಶನಿ)ವಾರ	ಆವರಾದಿ
34.	04-12-2011	ದೇವ(ಭಾನು)ವಾರ	,,
35.	05-12-2011	ಶಿವ(ಸೋಮ)ವಾರ	ಸವದತ್ತಿ
36.	06-12-2011	ಬಸವ(ಮಂಗಳ)ವಾರ	ಬೈಲಹೊಂಗಲ
37.	07-12-2011	ಚನ್ನ(ಬುಧ)ವಾರ	,,
38.	08-12-2011	ಪ್ರಭು(ಗುರು)ವಾರ	ಬೆಳಗಾವಿ
39.	09-12-2011	ಮಾತೃ(ಶುಕ್ರ)ವಾರ	,,
40.	10-12-2011	ಶರಣ(ಶನಿ)ವಾರ	ಸಂಕೇಶ್ವರ
41.	11-12-2011	ದೇವ(ರವಿ)ವಾರ	ಗಡಿಹಿಂಗ್ಲಾಜ್
42.	12-12-2011	ಶಿವ(ಸೋಮ)ವಾರ	ಗೋಕಾಕ್
43.	13-12-2011	ಬಸವ(ಮಂಗಳ)ವಾರ	,,
44.	14-12-2011	ಚನ್ನ(ಬುಧ)ವಾರ	,,
45.	15-12-2011	ಪ್ರಭು(ಗುರು)ವಾರ	,,
46.	16-12-2011	ಮಾತೃ(ಶುಕ್ರ)ವಾರ	ಶೇಗುಣಸಿ
47.	17-12-2011	ಶರಣ(ಶನಿ)ವಾರ	ಖವಟಕೊಪ್ಪ
48.	18-12-2011	ದೇವ(ಭಾನು)ವಾರ	ತಾಂವಶಿ
49.	19-12-2011	ಶಿವ(ಸೋಮ)ವಾರ	ಅಥಣಿ
50.	20-12-2011	ಬಸವ(ಮಂಗಳ)ವಾರ	ಕನಮಡಿ
51.	21-12-2011	ಚನ್ನ(ಬುಧ)ವಾರ	,,
52.	22-12-2011	ಪ್ರಭು(ಗುರು)ವಾರ	ಚಡಚಣ
53.	23-12-2011	ಮಾತೃ(ಶುಕ್ರ)ವಾರ	ಬಿಜಾಪುರ
54.	24-12-2011	ಶರಣ(ಶನಿ)ವಾರ	ಗುಲಬರ್ಗಾ (ಬ.ಮಂಟಪ ನೃಪತುಂಗ ಕಾಲನಿ ಸಂಜೆ-6)
55.	25-12-2011	ದೇವ(ಭಾನು)ವಾರ	ಗುಲಬರ್ಗಾ(ಬ.ಮಂಟಪ ಮಹಾಂತನಗರ)

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಲೇಖನಗಳು	ಲೇಖಕರು	ಪುಟ
1. ಚನ್ನಬಸವೇಶ -ಮಂಟಪದ ಮಾಣಿಕ್ಯ	ಮಾತಾಜಿ	1
2. ಇಪ್ಪತ್ತೈದನೆಯ ಶರಣ ಮೇಳ		3
3. ಸಂಪಾದಕೀಯ : ಪೇಜಾವರ ಶ್ರೀಗಳ ಅತಿರೇಕದ ಹೇಳಿಕೆ.	ಮಾತಾಜಿ	5
5. ಬಸವ ವಚನಾಮೃತ ಭಾಗ -37	ಮಾತಾಜಿ	6
6. ಶರಣ ಬಂಧುಗಳಲ್ಲಿ ವಿಶೇಷ ಮನವಿ.	ಪ್ರಭುಪ್ರಸಾದ ಬಂಡಿ	20
7. ನೆನಪಿನ ಬುತ್ತಿ ಬಿಚ್ಚಿದಾಗ- 4	ಮಾತಾಜಿ	21
8. 25 ಪ್ರವಚನ ವೀಡಿಯೋ ಯೋಜನೆ	ಮಾತಾಜಿ	29
9. ಪೂಜ್ಯ ಶ್ರೀಜಗದ್ಗುರು ಮಾತೆ ಗಂಗಾದೇವಿಯವರ ಶರಣ ಮೇಳ ಪ್ರಚಾರ ವಿವರ	ಮಾತಾಜಿ	30

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2011ರಂದು ವ್ರತವನ್ನು ಪೂರ್ಣ ಗೊಳಿಸಬೇಕು.

1. ಗುರು ಸಾರಾಯ ಸಂಪದ್ ವ್ರತ – ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ – ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ – ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ – ಜನವರಿ 1ರಂದು

ಶರಣ ಬಂಧುಗಳಲ್ಲಿ ವಿನಂತಿ

ಕಲ್ಯಾಣ ಕಿರಣ ತಲುಪದಿದ್ದಲ್ಲಿ ನಿಮ್ಮ ಚಂದಾ ಸಂಖ್ಯೆ, ಪೂರ್ಣ ವಿಳಾಸ, ಪಿನ್‌ಕೋಡ್, ದೂರವಾಣಿ ಸಂಖ್ಯೆ ಯಾವ ತಿಂಗಳು ತಲುಪಿಲ್ಲ, ಸವಿವರವಾಗಿ ಈ ದೂರವಾಣಿ ಸಂಖ್ಯೆಗಳಿಗೆ 8970898205, 8892912123 ಎಸ್.ಎಂ.ಎಸ್. ಮುಖಾಂತರ ಕಳುಹಿಸಿರಿ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 080-23131476, 22923736

56.	26-12-2011	ಶಿವ (ಸೋಮ)ವಾರ	ಯಲಮಾಮಿಡಿ
57.	27-12-2011	ಬಸವ (ಮಂಗಳ)ವಾರ	ಉದಗೀರ
58.	28-12-2011	ಚನ್ನ(ಬುಧ)ವಾರ	ಬೀದರ
59.	29-12-2011	ಪ್ರಭು(ಗುರು)ವಾರ	ಕೋಳಾರ (ಕೆ)
60.	30-12-2011	ಮಾತೃ(ಶುಕ್ರ)ವಾರ	ಜಹಿರಾಬಾದ್
61.	31-12-2011	ಶರಣ(ಶನಿ)ವಾರ	ಹೈದ್ರಾಬಾದ್
62.	01-01-2012	ದೇವ(ರವಿ)ವಾರ	"
63.	02-01-2012	ಶಿವ(ಸೋಮ)ವಾರ	"
64.	03-01-2012	ಬಸವ(ಮಂಗಳ)ವಾರ	"
65.	04-01-2012	ಚನ್ನ(ಬುಧ)ವಾರ	"
66.	05-01-2012	ಪ್ರಭು(ಗುರು)ವಾರ	"
67.	06-01-2012	ಮಾತೃ(ಶುಕ್ರ)ವಾರ	"
70.	07-01-2012	ಶರಣ(ಶನಿ)ವಾರ	"
71.	08-01-2012	ದೇವ(ಭಾನು)ವಾರ	"
72.	09-01-2012	ಶಿವ(ಸೋಮ)ವಾರ	"
73.	10-01-2012	ಬಸವ (ಮಂಗಳ)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

ದಾನಿಗಳ ಗಮನಕ್ಕೆ

ತಟ್ಟೆ-ಲೋಟಗಳ ಕೊಡುಗೆಗೆ ಸೂಚನೆ

ಶರಣ ಮೇಳದ ಬೃಹತ್ ದಾಸೋಹಕ್ಕೆ ಶರಣ ಬಂಧುಗಳು ತಟ್ಟೆಗಳನ್ನು ಕೊಟ್ಟಿದ್ದು ಉಪಯೋಗವಾಗುತ್ತಿದೆ. ಈ ಮಧ್ಯೆ ತಟ್ಟೆ- ಲೋಟಗಳು ಹಳೆಯವಾಗಿವೆ, ಮುರಿದಿವೆ, ಕಳೆದೂ ಹೋಗಿವೆ. ಶರಣ ಮೇಳದ ದಾಸೋಹ ಬೆಳೆಯುತ್ತಲಿದೆ. ಆದ್ದರಿಂದ ಶರಣ ಬಂಧುಗಳಿಂದ ತಟ್ಟೆಗಳ ದಾನ ಅಗತ್ಯವಾಗಿದೆ. 11 ಅಂಗುಲ ಅಗಲ, ಕಂಠವಿರುವ ಸ್ಟೀಲ್ ತಟ್ಟೆಗಳನ್ನು ತಮ್ಮ ತಮ್ಮ ಶಕ್ತ್ಯಾನುಸಾರ ಕೊಂಡು ತಂದು ಶರಣ ಬಂಧುಗಳು ದೇಣಿಗೆಯಾಗಿ ನೀಡಲು ಅವಕಾಶ ಉಂಟು. ಅದೇ ರೀತಿ ನೀರಿನ ಲೋಟ, ಚಿಕ್ಕ ಟೀ ಲೋಟಗಳನ್ನು ತಂದು ಕೊಡಲು ಅವಕಾಶ ಉಂಟು. ಶರಣ ಮೇಳಕ್ಕೆ ತಂದು ಕೊಡಬಹುದು. ಇಲ್ಲವೇ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಶರಣ ಮೇಳ ಪ್ರಚಾರಕ್ಕೆ ಬಂದಾಗ ಕೊಡಬಹುದು.

ಹೋಲ್‌ಸೇಲ್ ಬೆಲೆ ವಿಚಾರಿಸಿದಾಗ 11 ಅಂಗುಲದ ಉತ್ತಮ ಸ್ಟೀಲ್ ತಟ್ಟೆಯ ಬೆಲೆ ಒಂದಕ್ಕೆ 65ರೂ ಇದೆ. ದಾನಿಗಳು ಹಣದ ರೂಪದಲ್ಲೂ ಕೊಡಬಹುದು. ಅವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಖರೀದಿಸಲಾಗುತ್ತದೆ. ನೀರಿನ ಲೋಟ 12ರೂ. ಟೀ ಲೋಟ 6 ರೂ. ಬೆಲೆ ಇದೆ. ಅವರವರ ಶಕ್ತ್ಯಾನುಸಾರ ಕೊಡಬಹುದು.ಪ್ರತಿಯೊಬ್ಬ ಶರಣರೂ ಶರಣಮೇಳಕ್ಕೆ ಬರುವಾಗ ಕನಿಷ್ಟ ಒಂದು ತಟ್ಟೆ ಮತ್ತು ಒಂದು ಲೋಟವನ್ನು ತಂದು ಸಮರ್ಪಿಸಿದರೂ ಉಪಕಾರವಾಗುತ್ತದೆ.

- ಜಗದ್ಗುರು ಮಾತೆ ಮಹಾದೇವಿ




ಶರಣ ವಂದನೆ







ಧ್ವಜಾರೋಹಣ ಶರಣ ಶಂಕರಪ್ಪ ಮಹಾಂತಗೋಳ್ ಅವರಿಂದ



ಕಲ್ಯಾಣ ಪರ್ವ- ಉದ್ಘಾಟನೆ ಸಂಸದ ಧರ್ಮಸಿಂಗ್ ಅವರಿಂದ





ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ಪೀಠಾರೋಹಣ

CPMG/KA/BGW 50/2009-2011, RNI 19980/70, POSTED AT MBC BANGALORE GPO ON 3,10,20 OF EVERY MONTH. LICENCED TO POST WITHOUT PRE PAYMENT WPP-17, PAGES 32+4